ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಜನವರಿ 2021

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ವರ್ಗಾಯಿಸಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

Regn.No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-21 ಸಂಚಿಕೆ-1 ಪುಟಗಳು-6 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾ ಮಂಡಲದ ಮಹಾಸಭೆ



ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಮಹಾಸಭೆಯು ತಾ.20-12-2021ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಸಭಾಭವನದಲ್ಲಿ ನೆರವೇರಿತು. 15 ಸದಸ್ಯ ಸಂಘಗಳ ಪ್ರತಿನಿಧಿಗಳು ಹಾಗೂ ಸುಮಾರು 20 ಜನ ಖಾಯಂ ಸಂಪನ್ಮೂಲ ಸದಸ್ಯರು ಈ ಸಭೆಯಲ್ಲಿ ಭಾಗವಹಿಸಿದ್ದರು. ಮಹಾಮಂಡಲದ ಅಧ್ಯಕ್ಷರಾದ ಶ್ರೀ ಎನ್.ಕೆ. ಜಗನ್ನಿವಾಸ ರಾವ್ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯದರ್ಶಿಗಳಾದ ಶ್ರೀ ದೇವಾನಂದ ಭಟ್ ಇವರು ವರದಿಯನ್ನು ವಾಚಿಸಿದರು. ಕೋಶಾಧಿಕಾರಿಗಳಾದ ಶ್ರೀ ಉದಯಕುಮಾರ್ ಇವರು ಲೆಕ್ಕಪತ್ರ ಮಂಡನೆ ಮಾಡಿದರು. ಈ ವರದಿ ಹಾಗೂ ಲೆಕ್ಕಪತ್ರವನ್ನು ಸಭೆಯು ಅನುಮೋದಿಸಿತು. ಸದಸ್ಯರ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರವನ್ನು ಅಧ್ಯಕ್ಷರು ನೀಡಿದರು. ಪರವೂರಿನ ಸದಸ್ಯರು ಈ ಸಭೆಯಲ್ಲಿ ಝೂಮ್ ಆಪ್ ಮೂಲಕ ಭಾಗವಹಿಸಿದ್ದರು. ಉಪಾಧ್ಯಕ್ಷರಾದ ಡಾ। ವೈ.ಸುದರ್ಶನ್ ರಾವ್‌ರವರು ಧನ್ಯವಾದಗಳನ್ನು ನೀಡಿದರು. ಸಭೆಯ ನಂತರ ಮುಂದಿನ ಮೂರು ವರ್ಷಗಳಿಗೆ ನೂತನ ಆಡಳಿತ ಮಂಡಳಿಯನ್ನು ಆಯ್ಕೆ ಮಾಡಲಾಯಿತು. 15 ಸದಸ್ಯರ ಸಂಘಗಳಿಂದ ಒಬ್ಬರಂತೆ ಕಾರ್ಯಕಾರಿ ಸಮಿತಿಗೆ ಆಯ್ಕೆ ಮಾಡಲಾಯಿತು. ಸಂಪನ್ಮೂಲ ಸದಸ್ಯರಿಂದ 13 ಮಂದಿಯನ್ನು ಕಾರ್ಯಕಾರಿ ಸಮಿತಿಗೆ ಆಯ್ಕೆ ಮಾಡಲಾಯಿತು. ನಂತರ ಕಾರ್ಯಕಾರಿ ಸಮಿತಿಯು ಸಭೆ ಸೇರಿ ಶ್ರೀ ದೇವಾನಂದ ಭಟ್ ಅವರನ್ನು ಅಧ್ಯಕ್ಷರನ್ನಾಗಿ, ಡಾ। ವೈ. ಸುದರ್ಶನ್ ರಾವ್ ಇವರನ್ನು ಕಾರ್ಯದರ್ಶಿಯಾಗಿಯೂ, ಶ್ರೀ ಉದಯ ಬಾರ್ಕೂರು ಇವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಮುರಳೀಧರ ಶರ್ಮ ಇವರನ್ನು ಜೊತೆ ಕಾರ್ಯದರ್ಶಿಯಾಗಿಯೂ, ಶ್ರೀ ಎಂ.ಎಸ್. ನಟರಾಜ್ ಇವರನ್ನು ಕೋಶಾಧಿಕಾರಿಯಾಗಿ ಆಯ್ಕೆ ಮಾಡಿತು. ಶ್ರೀ ಸಿ.ಎಸ್.ರಾವ್ ಚುನಾವಣಾಧಿಕಾರಿಗಳಾಗಿದ್ದರು. ಭೋಜನದೊಂದಿಗೆ ಸಭೆಯು ಮುಕ್ತಾಯವಾಯಿತು.

## ಶಿವಪಂಚಾಕ್ಷರೀ ಯಾಗ ಸಂಪನ್ನ




ಅಖಿಲ ಸ್ಥಾನಿಕ ಪುರೋಹಿತ ಅರ್ಚಕ ಪರಿಪಾಲನ ಸಭಾ ಮಂಗಳೂರು, ಬೈಂದೂರು ವಲಯದಿಂದ ದಿನಾಂಕ 25.12.2020ರಂದು ತಾಲೂಕಿನ ಹೇರಂಜಾಲು ಶ್ರೀ ಗುಡೇಮಹಾಲಿಂಗೇಶ್ವರ ದೇವಳದಲ್ಲಿ ಲೋಕಕಲ್ಯಾಣಕ್ಕಾಗಿ ಶ್ರೀ ಶಿವಪಂಚಾಕ್ಷರೀ ಯಾಗವನ್ನು ಸಂಪನ್ನಗೊಳಿಸಿತು. ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯ ನಮ್ಮ ಸಮಾಜದ ಪುರೋಹಿತರು ಬ್ರಹ್ಮಶ್ರೀ ವಾಗೀಶ ತಂತ್ರಿಯವರ ಮಾರ್ಗದರ್ಶನದಲ್ಲಿ ಯಾಗವನ್ನು ಸಂಪನ್ನಗೊಳಿಸಿದರು. ಹಿಂದಿನ ದಿನ ಸಂಜೆ ಅಗ್ನಿ ಮಥನದಿಂದ ಅಗ್ನಿ ಜನನ ಮಾಡಲಾಯಿತು. ಪ್ರಾತಃಕಾಲ 6.30ಕ್ಕೆ ವೇದಬ್ರಹ್ಮ ವಾಗೀಶ ಶಾಸ್ತ್ರಿಯವರ ನೇತೃತ್ವ, ವೇದಬ್ರಹ್ಮ ಕೃಷ್ಣರಾಜ ಭಟ್‌ರವರ ಪ್ರಧಾನ ಆಚಾರ್ಯತ್ವದಲ್ಲಿ ಶ್ರೀಮತಿ ಭಾಗ್ಯಲಕ್ಷ್ಮೀ ಮತ್ತು ಶ್ರೀಕಂಠ ಮೇರ್ಟ ದಂಪತಿಗಳ ಪವಿತ್ರ ಪಾಣಿಯಲ್ಲಿ 25 ಮಂದಿ ಋತ್ವಿಜರ ಸಹಯೋಗದೊಂದಿಗೆ ಪ್ರಾರಂಭವಾದ ಯಾಗವು 10 ಗಂಟೆಗೆ ವಸೋರ್ಧಾರ ಮಹಾಪೂರ್ಣಾಹುತಿಯೊಂದಿಗೆ ಸುಸಂಪನ್ನಗೊಂಡಿತು. ಎಲ್ಲಾ ಋತ್ವಿಜರು ಸಮವಸ್ತ್ರದಲ್ಲಿ ರುದ್ರಾಕ್ಷಿ ಧಾರಣೆ ಮಾಡಿ ಏಕಸ್ವರದಲ್ಲಿ ಮಂತ್ರಪಠನ ಮಾಡುವುದನ್ನು ನೋಡಿ ಭಕ್ತರು ಭಕ್ತಿ ಪರವಶರಾದರು. ತದನಂತರ ವೇದಮೂರ್ತಿ ರವಿ ಉಪಾಧ್ಯಾಯ ಹಾಗೂ ವೇದಮೂರ್ತಿ ಸುಬ್ರಹ್ಮಣ್ಯ ಉಪಾಧ್ಯಾಯರ ವೇದಘೋಷಣೆಯೊಂದಿಗೆ ಪ್ರಾರಂಭವಾದ ಧಾರ್ಮಿಕ ಕಾರ್ಯಕ್ರಮವನ್ನು ಉಮೇಶ ಶ್ಯಾನುಭೋಗ್ ಉದ್ಘಾಟಿಸಿದರು. ವೇದಬ್ರಹ್ಮ ಜಗದೀಶ ಉಪಾಧ್ಯಾಯರು ಪ್ರಧಾನ ಉಪನ್ಯಾಸದ ಮೂಲಕ ಎಲ್ಲರನ್ನೂ ಧರ್ಮಜಾಗೃತಿಗೊಳಿಸಿದರು. ಶೃಂಗೇರಿ ಮಠದ ಉಡುಪಿ ಪ್ರಾಂತೀಯ ಧರ್ಮಾಧಿಕಾರಿಗಳಾದ ಬ್ರಹ್ಮಶ್ರೀ ವಾಗೀಶ ತಂತ್ರಿಗಳು ಯಾಗದ ಬಗ್ಗೆ ತಿಳಿಸಿದರು. ಉಪಾಧ್ಯಕ್ಷರಾದ ವೇದಮೂರ್ತಿ ಜಗದಾಭಿರಾಮಸ್ವಾಮಿ ಪ್ರಾಸ್ತಾವಿಕ ಭಾಷಣಗೈದರು. ಅಧ್ಯಕ್ಷರಾದ ವೇದಮೂರ್ತಿ ಗುರುಪ್ರಸಾದ್ ಹೆಬ್ಬಾರ್ ಶುಭಾಸಂಸನೆಗೈದರು. ದೇವಳದ ಧರ್ಮದರ್ಶಿ ಪದ್ಮನಾಭ ಮೇರ್ಟರು ಎಲ್ಲರನ್ನು ಅಭಿನಂದಿಸಿದರು. ವೇದಮೂರ್ತಿ ರಾಘವೇಂದ್ರ ಭಟ್ ಬಾರ್ಕೂರು ಇವರು ಸ್ವಾಗತಿಸಿದರು. ಕಾರ್ಯದರ್ಶಿ ವೇದಮೂರ್ತಿ ಚಿದಾನಂದ ಶ್ಯಾನುಭೋಗ್ ವಂದಿಸಿದರು. ಕಾರ್ಯಕ್ರಮದ ಭೋಜನದ ಪ್ರಾಯೋಜಕತ್ವವನ್ನು ಉದ್ಯಮಿ ಉಮೇಶ ಶ್ಯಾನುಭೋಗ್‌ರವರು ವಹಿಸಿಕೊಂಡಿದ್ದರು. ಯಾಗದ ದ್ರವ್ಯವನ್ನು ಹಾಗೂ ಎಲ್ಲಾ ಸಾಹಿತ್ಯಗಳನ್ನು ಶ್ರೀಕಂಠ ಮೇರ್ಟ ಹಾಗೂ ಮೇರ್ಟ ಕುಟುಂಬಸ್ಥರು ವಹಿಸಿಕೊಂಡಿದ್ದರು. ಧರ್ಮದರ್ಶಿ ಪದ್ಮನಾಭ ಮೇರ್ಟ ಹಾಗೂ ಅವರ ಸಹೋದರರ ಆದರಾತಿಥ್ಯ ಪರಸ್ಪರ ಸಹಕಾರದಿಂದ ಯಾಗವು ಸಾಂಗವಾಗಿ ನೆರವೇರಿತು.




With Best Compliments from :

Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
JALAJA SKIN CARE AND COSMETOLOGY CLINIC
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)


ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

ಶುಭಾಶಯಗಳೊಂದಿಗೆ
ಡಾ। ವಿಜಯಾ ರಾವ್ ವೈ.ಬಿ
ಎಂ.ಬಿ.ಬಿ.ಎಸ್; ಡಿ.ಜಿ.ಒ.(ಡಿ.ಎನ್.ಬಿ)
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು

ಗಾಂಧಿ ಆಸ್ಪತ್ರೆ ಹಾಗೂ ಸುನಾಗ್ ಆಸ್ಪತ್ರೆ ಉಡುಪಿಯಲ್ಲಿ ಸಂದರ್ಶನಕ್ಕಾಗಿ ಲಭ್ಯ
ಫೋನ್ : 9448164327

# ಸಂಕ್ರಮಣ–ಎಳ್ಳು ಬೆಲ್ಲದಂಗ ಇರೋಣ

ಲೇಖನ : ವೈ.ಮೋಹನ ರಾವ್
ಅಂಚೆಚೀಟಿ ಸಂಗ್ರಹ : ಕೃಷ್ಣಯ್ಯ ಎಂ.ಕೆ.




ಮಲೆನಾಡಿನ ಪ್ರಸಿದ್ಧ ಅರಸು ಮನೆತನವಾದ “ಕೆಳದಿಯ ಅರಸರ” ದೊರೆಗಳಲ್ಲಿ ಓರ್ವನಾದ ‘ಕೆಳದಿ ಕುಲತಿಲಕ ಹಿರಿಯ ವೆಂಕಟಪ್ಪ ನಾಯಕ’ ಎಂಬ ಐತಿಹಾಸಿಕ ಕಾದಂಬರಿಯಲ್ಲಿ (ಬರೆದವರು ಅಂಬ್ರಯಮಠ) ವೆಂಕಟಪ್ಪ ನಾಯಕ ಹೇಳುವ ಮಾತುಗಳು. “ಅಣ್ಣ ರಾಮರಾಜ ಹಾಗೂ ನನ್ನನ್ನು ಎದುರಾ ಬದುರಾ ಕೂಡಿಸಿಕೊಂಡು ( ಅಪ್ಪ ದೊಡ್ಡ ಸಂಕಣ್ಣ ನಾಯಕ ) ಬ್ರಾಹ್ಮೀ ಮುಹೂರ್ತದ ಮಹತ್ವವನ್ನು ಬಣ್ಣಿಸುತ್ತಿದ್ದರು. ಬ್ರಾಹ್ಮೀ ಮುಹೂರ್ತ ಆರಂಭವಾಗುವುದು ಸೂರ್ಯ ಹುಟ್ಟುವ ಎರಡೂವರೆ ತಾಸುಗಳ ಮೊದಲು. ಈ ಸಮಯದಲ್ಲಿ ದೇವತೆಗಳು ಸಂಚರಿಸತೊಡಗುತ್ತಾರೆ. ಅವರು ಶಕ್ತಿ ಪಡೆದುಕೊಳ್ಳುವುದು ಈ ಸಮಯದಲ್ಲೇ. ಮನುಷ್ಯರೂ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದರೆ ಆಕಾಶದಿಂದ ಇಳಿದು ಭೂಮಿಗೆ ಅತ್ಯಂತ ಸಮೀಪದಲ್ಲಿ ಬರುವ ಪವಿತ್ರ ಸೋಮದ್ರವ್ಯ ಎಂಬ ಓಜಸ್ಸಿನ ಗಾಳಿ ಮಾನವನ ದೇಹಕ್ಕೆ, ವಿಶೇಷವಾಗಿ ಶ್ವಾಸಕೋಶಗಳಿಗೆ ಶಕ್ತಿ ನೀಡುತ್ತದೆ. ಮನಸ್ಸು ಪ್ರಫುಲ್ಲಿತವಾಗುತ್ತದೆ. ಬ್ರಾಹ್ಮೀ ಮುಹೂರ್ತದಲ್ಲಿ ಏಳುವ ಪ್ರತಿ ಜೀವಕ್ಕೆ ದೇವತೆಗಳೂ ಶಕ್ತಿಯನ್ನು ತುಂಬುತ್ತಾರೆ. ಮಾನವರು ಇಚ್ಛಿಸುವ ಕೆಲಸ ಯಶಸ್ವಿಯಾಗುತ್ತದೆ. ಸಂಪತ್ತೂ ವೃದ್ಧಿಸುತ್ತದೆ. ನಮ್ಮ ಋಷಿ ಮುನಿಗಳು ಬ್ರಾಹ್ಮೀ ಮುಹೂರ್ತದ ಮಹತ್ವವನ್ನು ಅರಿತವರಾದುದರಿಂದ ಅವರು ಯೋಗಾಭ್ಯಾಸ, ಧ್ಯಾನ, ಪ್ರಾಣಾಯಾಮವನ್ನು ಆ ಸಮಯದಲ್ಲೇ ಕೈಗೊಳ್ಳುತ್ತಿದ್ದರು. ಆ ಮೂಲಕವಾಗಿ ದೈಹಿಕ ಹಾಗೂ ಮಾನಸಿಕ ಶಕ್ತಿಯನ್ನು ಪಡೆದುಕೊಳ್ಳುತ್ತಿದ್ದರು. ಅವರಲ್ಲಿರುವ ದೈವೀ ಗುಣಕ್ಕೆ ಕಾರಣ ಬ್ರಾಹ್ಮೀ ಮುಹೂರ್ತವೇ!”

ನಮ್ಮ ಪೂರ್ವಜರ ದೃಷ್ಟಿಯಲ್ಲಿ ಮುಂಜಾನೆಯ ಸೂರ್ಯ ಉದಯಿಸುವ ಕ್ಷಣ ಬಹಳ ಮಹತ್ವಪೂರ್ಣವಾಗಿತ್ತು. ಸೂರ್ಯೋದಯಕ್ಕೆ ಮೊದಲೇ ಏಳುವ ಸಂಪ್ರದಾಯವನ್ನು ವಿಧಿಸಿದರು. ಎಲ್ಲಾ ಜೀವರಾಶಿಗಳು, ಪ್ರಾಣಿ ಪಕ್ಷಿಗಳು ಸೂರ್ಯೋದಯಕ್ಕಿಂತ ಮೊದಲೇ ಎಚ್ಚೆತ್ತುಕೊಂಡು ಕಾರ್ಯನಿರತವಾಗುತ್ತವೆ. ಮುಂಜಾನೆಯ ಸೂರ್ಯ ಆಗಮಿಸುವ ಹೊತ್ತು ಬಹಳ ಪ್ರಾಮುಖ್ಯವೆನಿಸುತ್ತದೆ. ಮುಂಜಾನೆಯ ಸೂರ್ಯನನ್ನು ಲವಲವಿಕೆಯಿಂದ ಎದುರುಗೊಂಡರೆ ಅದರಿಂದ ನಮಗೆ ವಿಶೇಷ ಶಕ್ತಿ ಹಾಗೂ ಚೈತನ್ಯ ಒದಗಿ ಬರುತ್ತದೆ. ಮುಂಜಾನೆಯ ಸೂರ್ಯರಶ್ಮಿ ಮೈಮೇಲೆ ಬಿದ್ದಾಗ ಅದು ನಮ್ಮ ದೇಹದಲ್ಲಿ ಅದ್ಭುತ ಚೈತನ್ಯವನ್ನು ತುಂಬುತ್ತದೆ. ಬೆಳಗಿನ ಜಾವದಲ್ಲಿ ಕೇಳಿ ಬರುವ ಹಕ್ಕಿಗಳ ಇಂಚರಕ್ಕೆ ಕಿವಿಕೊಟ್ಟರೆ ಮನಸ್ಸಿಗೆ ಅದೆಷ್ಟು ಉತ್ಸಾಹ, ಉಲ್ಲಾಸವಾಗುತ್ತದೆ. ಯೋಗದಲ್ಲೂ ಬೆಳಗ್ಗಿನ ಹೊತ್ತಿನಲ್ಲಿ ಸೂರ್ಯ ನಮಸ್ಕಾರ ಮಾಡಿದರೆ ಅದು ಆರೋಗ್ಯದ ದೃಷ್ಟಿಯಿಂದ ಅತ್ಯಂತ ಶ್ರೇಷ್ಠ ಯೋಗಾಭ್ಯಾಸ ಎನಿಸಿಕೊಂಡಿದೆ. ಮುಂಜಾನೆಯ ಸೂರ್ಯೋದಯದ ಹೊತ್ತಿನಲ್ಲಿ ಮಲಗಿ ನಿದ್ರಿಸುವುದೇ ಅನೇಕ ರೋಗಗಳಿಗೆ ಕಾರಣ. ಆದ್ದರಿಂದ ನಮ್ಮ ಪೂರ್ವಜರು ಬೆಳಗ್ಗಿನ ಸೂರ್ಯಕಿರಣವನ್ನು ಅದ್ಭುತ ಅಮೃತ ಸಮಾನ ಎಂದು ತಿಳಿದಿದ್ದರು. ಸೂರ್ಯನ ಕಿರಣ ಜೀವ ಚೈತನ್ಯವಾಗಿದೆ. ಅದು ಶಕ್ತಿಯ ರೂಪವಾಗಿದೆ. ಈ ಶಕ್ತಿಯನ್ನು ಉಪಯೋಗಿಸಿಕೊಂಡು ಗಿಡ ಮರಗಳು ತಮ್ಮ ಆಹಾರವನ್ನು ತಯಾರಿಸಿ ಕೊಳ್ಳುತ್ತವೆ. ಈ ಕಾರ್ಯದಲ್ಲಿ ಆಮ್ಲಜನಕವನ್ನು ಹೊರಬಿಡುತ್ತವೆ. ಇದು ಜನರ ಉಸಿರಾಟಕ್ಕೆ ಅತೀ ಅಗತ್ಯ. ಸಣ್ಣ ಕಳ್ಳಿ ಗಿಡವೊಂದು ಒಂದು ಹಿಡಿಮಣ್ಣಿನಲ್ಲಿ ಬೇರುಬಿಟ್ಟು ಕೇವಲ ಸೂರ್ಯನ ಕಿರಣಗಳಿಂದಲೇ ಆಹಾರವನ್ನು ಪಡೆದು ಬೆಳೆದು ನಿಲ್ಲುತ್ತದೆ. ಗೀತೆಯಲ್ಲಿ ಹೇಳಿದಂತೆ ಮರಗಳಲ್ಲಿ ಅಶ್ವತ್ಥ ಮರವೇ ಶ್ರೇಷ್ಠವಾಗಿದೆ. ಇದು ಜನರಿಗೆ ಅತೀ ಹೆಚ್ಚು ಆಮ್ಲಜನಕವನ್ನು ಒದಗಿಸುತ್ತದೆ. ಸೂರ್ಯ ರಶ್ಮಿಗೆ ಮನುಷ್ಯರ ಕೆಲವು ರೋಗಗಳನ್ನು ಗುಣಪಡಿಸುವ ಶಕ್ತಿ ಇದೆ. ಬಿಸಿಲು ಮೈಮೇಲೆ ಬಿದ್ದಾಗ ಶರೀರದಲ್ಲಿನ ಹಾನಿಕಾರಕ ಜೀವಾಣುಗಳು ನಾಶ ಹೊಂದುತ್ತವೆ. ಆಗ ದೇಹ ಕೆಲವು ರೋಗಗಳಿಂದ ಮುಕ್ತವಾಗುತ್ತದೆ. ಸೂರ್ಯನಿಲ್ಲದೇ ಈ ಭೂಮಿಯಲ್ಲಿ ಯಾವುದೇ ಜೀವರಾಶಿ ಬಾಳಿಬದುಕಲು ಸಾಧ್ಯವೇ ಇಲ್ಲ. ಸೂರ್ಯ ಮತ್ತು ಸೂರ್ಯನೊಬ್ಬನೇ ಇಡೀ ಜಗತ್ತಿಗೆ ಬೆಳಕನ್ನು ನೀಡುವ ಬೆಳಕಿನ ಮೂಲ. ಜೀವರಾಶಿಗಳಿಗೆ ಶಕ್ತಿ ಮೂಲ. ಆದ್ದರಿಂದಲೇ ಸೂರ್ಯ ನಮ್ಮ ದೇವರ ಪ್ರತಿರೂಪವೆನ್ನ ಬಹುದು. ಪೂರ್ವದಲ್ಲಿ ಉದಯಿಸಿ ನಮಗೆ ಬೆಳಕನ್ನು, ಶಕ್ತಿಯನ್ನು, ಲವಲವಿಕೆಯನ್ನು ನೀಡುವ ಸೂರ್ಯ ನಿತ್ಯವೂ ಕಾಣುವುದರಿಂದ ನಮಗೆ ಪೂರ್ವ ದಿಕ್ಕು ಪರಮ ಪವಿತ್ರ. ಧರ್ಮಪುರುಷನಾದ ಸೂರ್ಯನ ಆಗಮನದ ಹೆಬ್ಬಾಗಿಲು ಪೂರ್ವ. ನಮ್ಮ ಎಲ್ಲಾ ದೇವತಾ ಕಾರ್ಯಗಳಿಗೂ ಪೂರ್ವಾಭಿಮುಖವಾಗಿಯೇ ಕುಳಿತುಕೊಳ್ಳಬೇಕು. ಪ್ರಪ್ರಥಮವಾಗಿ ಪೂರ್ವ ದಿಕ್ಕು ದೇವತೆಗಳಿಂದ ಆವೃತ್ತವಾಗಿತ್ತು. ನಮ್ಮ ಪೂರ್ವಜರೆಲ್ಲರೂ ಪೂರ್ವದವರು. ಕಶ್ಯಪನ ಹದಿಮೂರು ಮಂದಿ ಪತ್ನಿಯರಲ್ಲಿ ಮನುಷ್ಯ, ಮೃಗ, ಪಕ್ಷಿ ಮುಂತಾದ ಜೀವಜಾಲದ ಉದಯವಾಯಿತು. ಆ ಹದಿಮೂರು ಮಂದಿ ಮಾತೆಯರು ಪೂರ್ವದಲ್ಲಿ ಪ್ರಸವಿಸಿದರಂತೆ. ಬ್ರಹ್ಮನು ಮೊದಲು ವೇದವನ್ನು ಪಠಿಸಿದ್ದು ಪೂರ್ವದಲ್ಲಿ. ಅವನು ಋಷಿಗಳಿಗೆ ಸಾವಿತ್ರೀ




ಮಂತ್ರೋಪದೇಶವನ್ನು ಮಾಡಿದ್ದು ಪೂರ್ವದಲ್ಲಿ. ಸೂರ್ಯನು ಯಾಜ್ಞವಾಲ್ಕ್ಯ ಮಹರ್ಷಿಗಳಿಗೆ ಶುಕ್ಲ ಯಜುರ್ವೇದವನ್ನು ಉಪದೇಶಿಸಿದ್ದು ಪೂರ್ವದಲ್ಲಿ. ದೇವೇಂದ್ರನಿಗೆ ಅಭಿಷೇಕ ವಾದುದು ಪೂರ್ವದಲ್ಲಿ. ದೇವತೆಗಳು ಮೊದಲು ಸೋಮರಸ ಪಾನಮಾಡಿದ್ದು ಪೂರ್ವದಲ್ಲಿ. ವಶಿಷ್ಠರು ಹುಟ್ಟಿದ್ದು ಅವರ ಅಂತ್ಯ ಮತ್ತು ಸಪ್ತರ್ಷಿ ಮಂಡಲವನ್ನು ಅಲಂಕರಿಸಿದ್ದು ಪೂರ್ವದಲ್ಲಿ.

ಸೂರ್ಯನು ದಕ್ಷಿಣ ಪಥದಿಂದ ಉತ್ತರ ಪಥದತ್ತ ಸಾಗುವ ಕಾಲ ಪುಣ್ಯಕಾಲ. ಇದು ಪುಣ್ಯ ಪರ್ವ ದಿನ ಸಂಕ್ರಮಣ. ಮಕರ ಕರ್ಕಾಟಕ ಸಂಕ್ರಾಂತಿ ವೃತ್ತದಲ್ಲಿ ಸೂರ್ಯನು ಬರುವುದರಿಂದ ಇದು ಸೂರ್ಯದೇವನ ಆರಾಧನಾ ಹಬ್ಬ. ಮಕರ ರಾಶಿಗೆ ಶನಿದೇವನೇ ಒಡೆಯ. ಸೂರ್ಯ ತನ್ನ ಸುತ್ತ ಶನಿಯನ್ನು ಸಂಧಿಸುವ ದಿನ. ಭಾರತೀಯ ಕಾಲಮಾನದಂತೆ ಪುಷ್ಯ ಮಾಸದಲ್ಲಿ ಬರುವ ಹಬ್ಬವು ಉತ್ತರಾಯಣ ಪುಣ್ಯ ಕಾಲ. ಜನವರಿ 14–15 ರಂದು ಬರುವ ಹಬ್ಬ ಉತ್ತರಾಯಣ ಪುಣ್ಯಕಾಲ. ದೇವತೆಗಳ ಕಾಲದಲ್ಲಿ ಬರುವ ಹಬ್ಬ. ಸಂಕ್ರಮಣದ ಉತ್ತರಾಯಣ ಪುಣ್ಯಕಾಲದಲ್ಲಿ ಸ್ವರ್ಗದ ಬಾಗಿಲು ತೆರೆದಿರುತ್ತದೆ. ಶ್ರೀಕೃಷ್ಣ ಪರಮಾತ್ಮನು ಗೀತೆಯಲ್ಲಿ ಹೇಳಿದಂತೆ ಆಯನಗಳಲ್ಲಿ ಉತ್ತರಾಯಣವೇ ಶ್ರೇಷ್ಠವಾಗಿದೆ. ಅಗ್ನಿರ್ಜ್ಯೋತಿರಹಃ ಶುಕ್ಲ ಷಣ್ಮಾಸಾ ಉತ್ತರಾಯಣಮ್ । ತತ್ರ ಪ್ರಯಾತಾ ನಾಽಯಾಂತಿ ಬ್ರಹ್ಮ ಬ್ರಹ್ಮವಿದೋ ಜನಾಃ ॥ ಅಗ್ನಿ ಮತ್ತು ಜ್ಯೋತಿ (ಎಂಬಿಬ್ಬರು ವಹ್ನಿಯ ಮಕ್ಕಳು), (ಮಧ್ಯಾಹ್ನದ ದೇವತೆಯ ಜತೆ) ಹಗಲಿನ ದೇವತೆ, (ಹುಣ್ಣಿಮೆಯ ದೇವತೆಯ ಜತೆ) ಶುಕ್ಲ ಪಕ್ಷದ ದೇವತೆ, ಉತ್ತರಾಯಣದ ಆರು ತಿಂಗಳು ದೇವತೆಗಳು, (ಸಂಕ್ರಾಂತಿಯ ದೇವತೆಯ ಜತೆ) ಉತ್ತರಾಯಣದ ದೇವತೆ – ಈ ದಾರಿಯಲ್ಲಿ ಬ್ರಹ್ಮಜ್ಞಾನಿಗಳಾದ ಜನರು ಭಗವಂತನನ್ನು ಸೇರುತ್ತಾರೆ ಮತ್ತೆ ಮರಳುವುದಿಲ್ಲ.

ಧರ್ಮಕ್ಷೇತ್ರವಾದ ಕುರುಕ್ಷೇತ್ರ ಯುದ್ಧದಲ್ಲಿ ಭೀಷ್ಮ ಪಿತಾಮಹರು ಅರ್ಜುನನ ಬಾಣಗಳ ಶರಶಯ್ಯೆಯಲ್ಲಿ ಮಲಗಿ ಯಾತನೆ ಅನುಭವಿಸುತ್ತಿದ್ದರು. ದಕ್ಷಿಣಾಯಣದಲ್ಲಿ ದೇಹತ್ಯಾಗ ಬೇಡವೆಂದು ಉತ್ತರಾಯಣದ ಕಾಲದವರೆಗೂ ಕಾದು ಇಚ್ಛಾಮರಣಿಯಾದ ಭೀಷ್ಮರು ದೇಹತ್ಯಾಗ ಮಾಡಿದರು. ಬ್ರಹ್ಮ ದೇವನು ಜಗತ್ತಿನ ಸೃಷ್ಟಿ ಪ್ರಾರಂಭಿಸಿದ್ದು, ಶಿವಪಾರ್ವತಿಯರ ವಿವಾಹ ನಡೆದದ್ದು, ಶ್ರೀಮನ್ ನಾರಾಯಣನು ವರಾಹಾವತಾರದಲ್ಲಿ ಭೂಮಿಗೆ ಸ್ಪರ್ಷ ಮಾಡಿದ್ದು, ಸಮುದ್ರ ಮಥನ ಕಾಲದಲ್ಲಿ ಮಹಾಲಕ್ಷ್ಮೀ ಅವತರಿಸಿದ್ದು, ಇಂದ್ರನಿಗೆ ಗೌತಮ ಮುನಿಗಳು ಶಾಪ ವಿಮೋಚನೆ ಮಾಡಿದ್ದು, ಋಷಿ ಮುನಿಗಳು ತಪಸ್ಸು ಮಾಡಿದ್ದು ಉತ್ತರಾಯಣ ಪುಣ್ಯಕಾಲದಲ್ಲಿ ಎಂದು ತಿಳಿದವರು ಹೇಳುತ್ತಾರೆ. ಈಗಲೂ ವಿವಾಹ, ನಾಮಕರಣ, ಗೃಹ ಪ್ರವೇಶ ಇತ್ಯಾದಿ ಶುಭ ಕಾರ್ಯಗಳು ಉತ್ತರಾಯಣದಲ್ಲೇ ಜರಗುತ್ತವೆ.



‘ಆರೋಗ್ಯ ಭಾಸ್ಕರಾತ್ ಇಚ್ಛೇತ್’ ಆರೋಗ್ಯ ಭಾಗ್ಯಕ್ಕೆ ಸೂರ್ಯೋಪಾಸನೆ, ಆರಾಧನೆ ಮುಖ್ಯ. ಸಂಕ್ರಮಣ ಹಬ್ಬದ ಸಂದರ್ಭದಲ್ಲಿ ಜನರು ನದಿಗಳ ಪುಣ್ಯಸ್ನಾನ ಮಾಡುತ್ತಾರೆ. ಗಂಗಾ, ಕೃಷ್ಣಾ, ತುಂಗಾ, ಕಾವೇರಿ, ನದಿಗಳಲ್ಲಂತೂ ಹಬ್ಬದ ದಿನ ಲಕ್ಷಾಂತರ ಭಕ್ತರು ಪುಣ್ಯಸ್ನಾನ ಮಾಡುತ್ತಾರೆ. ಬೆಳಗ್ಗೆ ಎಳ್ಳು ಹಚ್ಚಿ ಅಭ್ಯಂಗ ಸ್ನಾನ ಮಾಡಿ, ಹೊಸ ಬಟ್ಟೆ ಧರಿಸಿ ದೇವರಿಗೆ ವಿಶೇಷ ಪೂಜೆಗಳನ್ನು ಸಮರ್ಪಿಸುತ್ತಾರೆ. ಎಳ್ಳು ಬೆಲ್ಲದ ಮಿಶ್ರಣ ಎಲ್ಲರಿಗೂ ಹಂಚಿ ಸ್ನೇಹ, ಪ್ರೀತಿ,

(...3ನೇ ಪುಟದಿಂದ)

With Best Compliments From :



## ಸಂಕ್ರಮಣ–ಎಳ್ಳು ಬೆಲ್ಲದಂಗ ಇರೋಣ

■...2ನೇ ಪುಟದಿಂದ

ಸೌಹಾರ್ದತೆ ಬೆಳೆಸಿಕೊಳ್ಳುತ್ತಾರೆ. ಬ್ರಾಹ್ಮಣರಿಗೆ ಎಳ್ಳು ದಾನ ಮಾಡುವುದರಿಂದ ಸೂರ್ಯನು ಸಂತುಷ್ಟನಾಗಿ ಆಜನ್ಮ ಪರ್ಯಂತ ಅನುಗ್ರಹಿಸುತ್ತಾನೆ.

ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ಸಂಕ್ರಮಣ, ತಮಿಳುನಾಡಿನಲ್ಲಿ ಪೊಂಗಲ್, ಕೇರಳದಲ್ಲಿ ಮಕರ ವಿಳಕ್ಕು, ಪಂಜಾಬ್ ಹಾಗೂ ಹರಿಯಾಣದಲ್ಲಿ ಲೋಹರಿ, ಪಶ್ಚಿಮಬಂಗಾಳ, ಅಸ್ಸಾಂನಲ್ಲಿ ಬೋಗಲಿಬಿಹು, ಗುಜರಾತ್, ರಾಜಸ್ಥಾನದಲ್ಲಿ ಉತ್ತರಾಯಣ, ಮಹಾರಾಷ್ಟ್ರದಲ್ಲಿ ಕುಸುರಕಾಳ ಅಥವಾ ಎಳ್ಳು ಲಡ್ಡು ವಿತರಿಸಿ ತಿಳಗೂಳ್ ಘ್ಯಾ, ಆಣಿ ಘೋಡ್ ಬೋಲಾ ಎನ್ನುವರು. ಹೀಗೆ ಸಂಕ್ರಾಂತಿಯು ದೇಶಾದ್ಯಂತ ಆಚರಿಸಲ್ಪಡುವುದು.

ಕರ್ಕಾಟಕ ವೃತ್ತಕ್ಕೆ ಸೂರ್ಯನು ಬರುವುದರಿಂದ ಚಳಿಕಾಲ ಕೊಂಚ ದೂರವಾಗಿ ಬೇಸಿಗೆ ಪ್ರಾರಂಭವಾಗುವುದು. ಈವರೆಗೆ ದೊಡ್ಡದಾಗಿದ್ದ ರಾತ್ರಿ ಹೊತ್ತು ಕಡಿಮೆಯಾಗಿ ಹಗಲು ದೊಡ್ಡದಾಗುತ್ತದೆ. ಚಳಿಕಾಲದಲ್ಲಿ ಬರುವ ಸಂಕ್ರಮಣದಲ್ಲಿ ಎಳ್ಳು, ಕೊಬ್ಬರಿ, ಕಡಲೆಕಾಯಿಗಳ ಸೇವನೆಯಿಂದ ಚಳಿಗೆ ಸುಕ್ಕು ಕಟ್ಟಿದ ಚರ್ಮಕ್ಕೆ ಎಣ್ಣೆ ಅಂಶ ದೊರೆತು ಚರ್ಮ ಒಡೆಯುವಿಕೆ ನಿಲ್ಲುತ್ತದೆ. ಕಾಂತಿ ಹೆಚ್ಚುತ್ತದೆ. ಅಂತೂ ಕತ್ತಲೆಯಿಂದ ಬೆಳಕಿನೆಡೆಗೆ ಎನ್ನುವಂತೆ ಜ್ಞಾನದ ಸಂಕೇತವಾದ ಬೆಳಕು ಹೆಚ್ಚಾಗುವ ಕಾಲ ಜ್ಞಾನ ತರುವ ಹಬ್ಬದ ಸಮಯವಾಗಿದೆ. ಇಂದು ನಾವು ಮುಂದುವರಿದ ವಿಜ್ಞಾನ ಯುಗದಲ್ಲಿದ್ದೇವೆ. ಸೂರ್ಯನ ಬೆಳಕು ಹೊಂದಿರುವ ಶಕ್ತಿಯನ್ನು ಬಳಸಿಕೊಂಡು ಅದನ್ನು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸಿ ಕೊಂಡಿದ್ದೇವೆ. ಸೌರ ಶಕ್ತಿಯನ್ನು ಅಡುಗೆ ಮಾಡುವುದು, ಸ್ನಾನಕ್ಕೆ ಬಿಸಿನೀರು, ರಾತ್ರಿ ಗಾಳಿ ಬೆಳಕು ಪಡೆದಿದ್ದೇವೆ. ವಾಹನಗಳನ್ನು ಓಡಿಸಲು ಬೇಕಾಗುವ ಇಂಧನವಾಗಿಯೂ ಕೂಡಾ ಉಪಯೋಗಿಸಿಕೊಳ್ಳುವ ಸಾಧ್ಯತೆಯನ್ನು ಆವಿಷ್ಕರಿಸಲಾಗಿದೆ. ಭೂಮಿಯಿಂದ ಸೂರ್ಯನಿರುವ ಸರಾಸರಿ ದೂರ ಸುಮಾರು 15 ಕೋಟಿ ಕಿಲೋಮೀಟರ್. ಸೂರ್ಯನ ಅಪಾರವಾದ ಶಾಖ ಮತ್ತು ಬೆಳಕುಗಳಿಂದಾಗಿಯೇ ಭೂಮಿಯ ಮೇಲಿನ ಬಹುತೇಕ ಚಟುವಟಿಕೆಗಳು ನಡೆಯುತ್ತಿವೆ. ಪ್ರತಿ 11 ವರ್ಷಗಳಿಗೊಮ್ಮೆ ಸೂರ್ಯ ಚಟುವಟಿಕೆಗಳು ಹೆಚ್ಚಿ ಸೂರ್ಯ ಹೆಚ್ಚು ಪ್ರಖರವಾಗುತ್ತಾನೆ. ಈ ಪ್ರಖರತೆಯ ಪರಿಣಾಮವಾಗಿ ಪರಮಾಣು ಕಣಗಳನ್ನು ಹಾಗೂ ಶಕ್ತಿಯುತವಾದ ವಿಕಿರಣಗಳನ್ನು ಯಥೇಚ್ಚ ಪ್ರಮಾಣದಲ್ಲಿ ಹೊರ ಚೆಲ್ಲುತ್ತಾನೆ. ಸೂರ್ಯನ ಅಂಗಳದಲ್ಲಿ ಲಭ್ಯವಿರುವ ಹೀಲಿಯಂ ಧಾತುವನ್ನು 1868 ರಲ್ಲಿ ಆಂಧ್ರದ ಗುಂಟೂರಿನಲ್ಲಿ ಮೊದಲ ಬಾರಿಗೆ ಸಂಪೂರ್ಣ ಸೂರ್ಯಗ್ರಹಣ ವೀಕ್ಷಣೆಯ ಸಮಯದಲ್ಲಿ ಗುರುತಿಸಿದರು. ಸೂರ್ಯ ಶಾಖದಿಂದ ಭೂಮಿಯು ಸಹಜವಾಗಿ ಎಷ್ಟು ಕಾಯಬೇಕಿತ್ತೋ ಅದಕ್ಕಿಂತ ಹೆಚ್ಚು ಕಾಯುತ್ತಿರುವುದರಿಂದ ಈಗ ವಿಶ್ವದೆಲ್ಲೆಡೆ ಚಳಿ ಹಾಗೂ ಬಿಸಿಲು ಅಗತ್ಯಕ್ಕಿಂತಲೂ ಹೆಚ್ಚಾಗಿ ಅಥವಾ ವಿಪರೀತ ಕಡಿಮೆಯಾಗಲು ಇದೇ ಕಾರಣವಾಗಿದೆ. ನಮ್ಮ ದೇಶದಲ್ಲಿ ಸೂರ್ಯನನ್ನು ಕುರಿತು ನಿರಂತರ ಅಧ್ಯಯನಗಳು ನಡೆಯುತಲೇ ಇವೆ. ವಿಷ್ಣು, ಶಿವ, ದುರ್ಗೆ, ಗಣಪತಿ ಇವರೆಲ್ಲ ಕಣ್ಣಿಗೆ ಕಾಣುವ ದೇವರುಗಳಲ್ಲ. ಸೂರ್ಯ ಸಾಕ್ಷಾತ್ತಾಗಿ ಕಾಣಿಸುವ ದೇವರು. ಅವನ ನಿಜ ಪ್ರತೀಕವೇ ಮುಗಿಲಿನಲ್ಲಿ ಕಂಗೊಳಿಸುತ್ತಿರುವಾಗ ಇನ್ನೊಂದು ಗುಡಿ ಕಟ್ಟುವ ಅವಶ್ಯಕತೆ ಪ್ರಾಚೀನರಿಗೆ ಅಷ್ಟೊಂದು ಬರಲಿಲ್ಲವೇನೋ. ಆದರೂ ತುಳುನಾಡಿನ ಪರಿಸರದಲ್ಲಿ ಮೂರು ಸೂರ್ಯ ದೇವಾಲಯಗಳು ಇವೆ. ಒಂದು ಕುಂಭಾಸಿಯಲ್ಲಿ, ಇನ್ನೊಂದು ಗುಡಿ ನಾರಾವಿಯಲ್ಲಿ ಮತ್ತು ಮೂರನೆಯದು ಕಾರ್ಕಳದಲ್ಲಿದೆ. ಬಾರಕೂರಿನಲ್ಲಿ ಪಂಚಲಿಂಗೇಶ್ವರ ದೇವಾಲಯದಲ್ಲಿ ಮಹಾಲಿಂಗೇಶ್ವರನ ಬಳಿ ಅತ್ಯಂತ ಸುಂದರವಾದ ಸೂರ್ಯನ ವಿಗ್ರಹವಿದೆ.

ವಿಜಯೋತ್ಸವದಿಂದ ವಿರಾಟನಗರಕ್ಕೆ ಮರಳಿದ ಕೀಚಕ ಅಲ್ಲಿದ್ದ ಸೈರಂಧ್ರಿ (ದ್ರೌಪದಿ)ಯನ್ನು ಕಂಡು ಮೋಹಿತನಾಗಿ ಅವಳ ಸೀರೆಗೆ ಕೈಇತ್ತ, ಆಗ ದ್ರೌಪದಿ ಸೂರ್ಯನಾರಾಯಣನನ್ನು ಸ್ತುತಿಸುತ್ತಾಳೆ. ಆಗ ಅವಳ ರಕ್ಷಣೆಯಾಗುತ್ತದೆ ಎಂಬ ಕಥೆಯಿದೆ. ಮಹರ್ಷಿ ಅಗಸ್ತ್ಯರು ಶ್ರೀರಾಮನ ಸಮೀಪ ಬಂದು ‘ಆದಿತ್ಯ ಹೃದಯಂ’ ಎಂಬ ಸ್ತೋತ್ರವನ್ನು ಹೇಳಲು ನುಡಿದರು. "ಆದಿತ್ಯ ಹೃದಯಂ ಪುಣ್ಯಂ, ಸರ್ವಶತ್ರು ವಿನಾಶನಮ್, ಜಯವಹಂ ಜಪೇನಿತ್ಯಂ, ಅಕ್ಷಯಂ ಪರಮಂ ಶಿವಂ" ಹೀಗೆ 33 ಸ್ತೋತ್ರಗಳಿವೆ. ಬಳಿಕವೇ ಶ್ರೀರಾಮನು ರಾವಣನನ್ನು ವಧಿಸಿದನು ಎಂಬ ಕಥೆಯೂ ಇದೆ.

ಜಪಾಕುಸುಮಸಂಕಾಶಂ ಕಾಶ್ಯಪೇಯಂ ಮಹಾದ್ಯುತಿಂ। ಧ್ವಾಂತಾ$ರಿಂ ಸರ್ವಪಾಪಘ್ನಂ ಪ್ರಣಮಾಮಿ ದಿನಕರವ್॥

ಆದಕಾರಣ ನಾವು ನೀವು ಸಂಕ್ರಮಣ ಪುಣ್ಯಕಾಲದಲ್ಲಿ ಎಳ್ಳುಬೆಲ್ಲ ಕೊಟ್ಟು ಎಳ್ಳುಬೆಲ್ಲದಂಗ ಇರೋಣ.

## ಮಕರ ಮಾಸದ ವಿಶೇಷ ದಿನಗಳು

| | | | |
|---|---|---|---|
| 14–01–2021 | ಹೇಮಂತ ಋತು, ಪೌಷ ಮಾಸದ ಶುಕ್ಲಪಕ್ಷಾರಂಭ, ಮಕರಸಂಕ್ರಮಣ, ಉತ್ತರಾಯಣ ಪುಣ್ಯಕಾಲ, ತಿಲಸಂಕ್ರಾತಿ, ಉಡುಪಿ ಬ್ರಹ್ಮರಥೋತ್ಸವ | 29–01–2021 | ಹೇಮಂತ ಋತು, ಪುಷ್ಯ ಮಾಸದ ಕೃಷ್ಣಪಕ್ಷಾರಂಭ, |
| 15–01–2021 | ಉಡುಪಿ ಚೂರ್ಣೋತ್ಸವ | 31–01–2021 | ಸಂಕಷ್ಠಹರ ಚತುರ್ಥಿ, ಚಂದ್ರೋದಯ ರಾತ್ರಿ 9.01 |
| 24–01–2021 | ಸರ್ವೈಕಾದಶಿ | 07–02–2021 | ಸ್ಮಾರ್ತೈಕಾದಶಿ |
| 28–01–2021 | ಹುಣ್ಣಿಮೆ | 08–02–2021 | ಭಾಗವತ ವೈಷ್ಣವೈಕಾದಶಿ |
| | | 11–02–2021 | ಅಮಾವಾಸ್ಯೆ |
| | | 12–02–2021 | ಶಿಶಿರ ಋತು, ಮಾಘಮಾಸದ ಶುಕ್ಲಪಕ್ಷಾರಂಭ, ಕುಂಭ ಸಂಕ್ರಮಣ |

## ನಿಧನ

### ಶ್ರೀ ವಿದ್ಯಾರಣ್ಯ ಕೊಲ್ಲಿ ಪಾಲು



ಬೆಂಗಳೂರಿನ ಎ.ಬಿ.ಎಸ್.ಬಿ ಸಭಾದ ಯುವ ಮುಂದಾಳು ಹಾಗೂ ಉದ್ಯೋಗ ಸಮಿತಿಯ ಸಕ್ರಿಯ ಕಾರ್ಯಕರ್ತ ಶ್ರೀ ವಿದ್ಯಾರಣ್ಯ ಕೊಲ್ಲಿ ಪಾಲು ಇವರು 10.01.2021 ರಂದು ನಿಧನ ಹೊಂದಿದರು. ಇವರು ಬಂಗಾಡಿ ಕಿಲ್ಲೂರಿನ ಕೊಲ್ಲಿಪಾಲಿನ ಶ್ರೀ ಚಂದ್ರಶೇಖರ ಹಾಗೂ ಶ್ರೀದೇವಿ ಅವರ ಪುತ್ರ. ಇವರು ಪತ್ನಿ ಡಾ। ಸುಶೀಲಾ ರಾವ್ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

### ಶ್ರೀಮತಿ ಪ್ರೇಮಲತಾದೇವಿ

ಮುಲ್ಕಿ ಬಪ್ಪನಾಡು ಶ್ರೀ ಬಿ.ಕೃಷ್ಣಮೂರ್ತಿ ರಾವ್ ರವರ ಸಹೋದರಿ ಹಾಗೂ ದಿ. ಬಪ್ಪನಾಡು ಭೋಜರಾಯರ ಮಗಳು ಶ್ರೀ ಪ್ರೇಮಲತಾದೇವಿ ಇವರು ತಾ. 11.12.2020 ರಂದು ತಮ್ಮ 82ನೇ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ ದೈವಾಧೀನರಾದರು.

### ಶ್ರೀಮತಿ ಸುಮಿತ್ರಾ

ಮುಂಡ್ಕೂರು ಶೇಷಪ್ಪಯ್ಯ ಇವರ ಪತ್ನಿ ಸುಮಿತ್ರಾ 31.12.2020 ರಂದು ನಿಧನ ಹೊಂದಿದರು.

### ಶ್ರೀಮತಿ ವಿದ್ಯಾಭೋಧಿನಿ

ಪಾದೆಬೆಟ್ಟು ಶ್ರೀ ಬಾಲಕೃಷ್ಣ ರಾವ್ ಇವರ ಪತ್ನಿ ಶ್ರೀಮತಿ ವಿದ್ಯಾಭೋಧಿನಿ ಇವರು 29.12.2020 ರಂದು ನಿಧನ ಹೊಂದಿದರು.

### ಕಿಗ್ಗ ಸುಬ್ರಹ್ಮಣ್ಯ ಶಾಸ್ತ್ರಿ

ಶ್ರೀ ಕಿಗ್ಗ ಸುಬ್ರಹ್ಮಣ್ಯ ಶಾಸ್ತ್ರಿ ಇವರು 28.12.2020 ರಂದು ನಿಧನ ಹೊಂದಿದರು.

### ಶರತ್ ಶ್ರೀನಿವಾಸ ರಾವ್

ಸಾಂಗ್ಲಿಯ ನಿವಾಸಿ ಎಲ್ಲೂರು ಶರತ್ ಶ್ರೀನಿವಾಸ ರಾವ್ ಇವರು 28.12.2020 ರಂದು ನಿಧನ ಹೊಂದಿದರು.

### ಶ್ರೀ ಶಿವಾಜಿ ರಾವ್



ಶ್ರೀಯುತ ಶಿವಾಜಿರಾವ್ ಎನ್.ಎಸ್. ಮೇಲಿನ ಶ್ಯಾರ (ದಿ.ನಾರಾಯಣ ರಾವ್ ಮತ್ತು ದಿ.ವೇದಾವತಿ ಇವರ ಪುತ್ರ) ರವರು ದಿ. 26–12–2020 ನೇ ಶನಿವಾರ ರಾತ್ರಿ ಶಿವೈಕ್ಯರಾಗಿರುತಾರೆ.

### ಶ್ರೀನಿವಾಸ ರಾವ್

ಬೆಂಗಳೂರಿನ ಎ.ಬಿ.ಎಸ್.ಬಿ. ಸಭಾ ಇದರ ಉಪಾಧ್ಯಕ್ಷರಾಗಿದ್ದ ಶ್ರೀ ಪುತ್ತಿಗೆ ಶ್ರೀನಿವಾಸ ರಾವ್ ಇವರು 25.12.2020 ರಂದು ನಿಧನ ಹೊಂದಿದರು.

### ಬಿ.ಕೆ. ಸುಬ್ಬರಾವ್

ಬಾರ್ಕೂರು ಬಿ.ಕೆ. ಸುಬ್ಬರಾವ್ ಹೊಳೆಹೊನ್ನೂರು ಇವರು 25.12.2020 ರಂದು ನಿಧನ ಹೊಂದಿದರು.

### ಶ್ರೀಮತಿ ಪ್ರೇಮಲತಾ

ಬಪ್ಪನಾಡು ಭೋಜರಾವ್ ಇವರ ಪತ್ನಿ ಶ್ರೀಮತಿ ಪ್ರೇಮಲತಾ ಇವರು 11.12.2020 ರಂದು ನಿಧನ ಹೊಂದಿದರು.

### ಶ್ರೀಮತಿ ಕುಸುಮ

ಶ್ರೀ ನಟ್ಟೋಜಿ ಹರಿಶ್ಚಂದ್ರ ರಾವ್ ಇವರ ಪತ್ನಿ ಕುಸುಮ 05.01.2020 ರಂದು ಹೆಜಮಾಡಿಯಲ್ಲಿ ನಿಧನ ಹೊಂದಿದರು.

### ಶ್ರೀಮತಿ ಸರೋಜಿನಿ

ಕೆಮ್ಮಣ್ಣು ಮುಲ್ಕಿ ಅನಂತ ಶರ್ಮ ಇವರ ಪತ್ನಿ ಶ್ರೀಮತಿ ಸರೋಜಿನಿ 06.01.2021 ರಂದು ನಿಧನ ಹೊಂದಿದರು.

### ಸದಾನಂದ

ಬೆಂಗಳೂರಿನ ಅಮೃತಹಳ್ಳಿ ನಿವಾಸಿ ಶ್ರೀ ಸದಾನಂದ ಮರವಂತೆ ಇವರು 18.12.2020 ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು.

### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ }

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ‘‘ಪಾರಾಯಣ’’ ಸಂಜೆ ಗಂಟೆ 4-30ರಿಂದ

**ತಾ.31-01-2021 ಸಂಕಷ್ಟಹರ ಚತುರ್ಥಿಯಂದು ‘‘ಸಾಮೂಹಿಕ ಗಣಹೋಮ’’ ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

ತಾ.07-02-2021 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.18-01-2020, ತಾ.02-02-2021 ಮತ್ತು ತಾ.16-02-2021 ಪಂಚಮಿಯಂದು ‘‘ನಾಗದೇವರಿಗೆ ತನುಸೇವೆ’’ ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

SAMPATH KUMAR Mobile : 9741508881
TRISHULINI TOURIST
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
ಯಶಸ್ವೀ ಎಂಟರ್‌ಪ್ರೈಸೆಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಶುಭಜನನ

ಪಡುಬಿದ್ರಿ ಖ್ಯಾತ ವೈದ್ಯ ಡಾ। ಗುರುಪ್ರಸಾದ್ ಹಾಗೂ ಡಾ। ಭಾಗ್ಯಶ್ರೀ ದಂಪತಿಗಳಿಗೆ 23.12.2020 ರಂದು ಹೆಣ್ಣು ಮಗುವಿನ ಜನನವಾಗಿರುತ್ತದೆ.

## ವಿನೂತನವಾಗಿ ಹುಟ್ಟುಹಬ್ಬ ಆಚರಣೆ

ಶ್ರೀ ಬೈಲಕೆರೆ ಗೋವಿಂದ ರಾವ್ ಇವರು ತನ್ನ 80ನೆಯ ಹುಟ್ಟುಹಬ್ಬವನ್ನು 12.12.2020 ರಂದು ಉಡುಪಿ ಕುಕ್ಕಿಕಟ್ಟೆಯ ಬಾಲನಿಕೇತನ ಅನಾಥಾಶ್ರಮದಲ್ಲಿ ಭೋಜನಕೂಟವನ್ನು ಏರ್ಪಡಿಸುವ ಮೂಲಕ ವಿಶಿಷ್ಟವಾಗಿ ಆಚರಿಸಿದರು.

## ರಾಜ್ಯ ಮಟ್ಟದ ಬಹುಮಾನ

ವಿಜಯ ಕರ್ನಾಟಕದ ಬಹು ಜನಪ್ರಿಯ 'ಭವಿಷ್ಯಕ್ಕಾಗಿ ಕನ್ನಡ ಕಹಳೆ' ಅಭಿಯಾನ ಭಾಗವಾಗಿ ನಡೆದ ಶುದ್ಧ ಕನ್ನಡ ಭಾಷಣ ಸ್ಪರ್ಧೆಯ ಫಲಿತಾಂಶದಲ್ಲಿ ಬೆಂಗಳೂರಿನ ವೈಷ್ಣವಿ ರಾವ್ ಮೂರನೇ ಬಹುಮಾನ ಗೆದ್ದುಕೊಂಡಿದ್ದಾಳೆ. ಇವಳು ಇನ್ನಾ ಮಧುಕರ್ ರಾವ್ ಹಾಗೂ ಪೂರ್ಣಿಮಾ ರವರ ಪುತ್ರಿ.

## ಕೋಡಿಗೆ ಹಳ್ಳಿ ದೇವಸ್ಥಾನದ ಹಾಡು ಬಿಡುಗಡೆ

ಕೋಡಿಗೆಹಳ್ಳಿ ದೇವಸ್ಥಾನದ ಚರಿತ್ರೆಯ ಹಾಡನ್ನು ಶ್ರೀ ರವೀಂದ್ರನಾಥ್ ಬೆಳ್ಳೆಯವರು ದಿನಾಂಕ 27–12–2020ರಂದು ಬಿಡುಗಡೆ ಮಾಡಿದರು. ಈ ಹಾಡಿನ ಸಾಹಿತ್ಯ ರಚನೆಯನ್ನು ಶ್ರೀಮತಿ ಸಪ್ನ ದಿನಕರ್ ಮಾಡಿದ್ದಾರೆ. ಸಂಗೀತ ಸಂಯೋಜನೆ ಶ್ರೀ ಎಲ್ಲೂರು ಶ್ರೀನಿವಾಸ ರಾವ್ ಮಾಡಿದ್ದಾರೆ. ಹಾಡಿದವರು ಶ್ರೀ ಪ್ರಶಾಂತ್, ಶ್ರೀಮತಿ ದೀಪ್ತಿ ಪ್ರಶಾಂತ್, ಶ್ರೀ ಎಲ್ಲೂರು ಶ್ರೀನಿವಾಸ ರಾವ್ ಹಾಗೂ ಶ್ರೀಮತಿ ಸ್ಮಿತಾ ರಾವ್

## ಸ್ವ–ಉದ್ಯೋಗದಲ್ಲಿ ತೊಡಗಿದ ಸ್ವಾಭಿಮಾನಿ ಮಹಿಳೆ

ಕಾರ್ಕಳದ ಶ್ರೀ ಕೃತ್ತಿವಾಸ ಶರ್ಮ ಹಾಗೂ ಪ್ರಭಾವತಿ ಇವರ ಪುತ್ರಿ ಶ್ರೀಮತಿ ಇವರು ಪ್ರಕೃತಿ ಫ್ಲೋರ್ ಮಿಲ್ ಎಂಬ ಸ್ವ–ಉದ್ಯೋಗವನ್ನು ಆರಂಭಿಸಿದ್ದಾರೆ. ತನ್ನ ಜೀವನದಲ್ಲಿ ಅನಿರೀಕ್ಷಿತವಾಗಿ ಹಲವಾರು ಏಳುಬೀಳುಗಳನ್ನು ಕಂಡಿದ್ದರು. ಸ್ವತಃ ಅನಾರೋಗ್ಯ ಕಾಡಿದ್ದರೂ ಎದೆಗುಂದದೆ ಕಾರ್ಕಳದಲ್ಲಿ ಹಿಟ್ಟಿನ ಗಿರಣಿಯನ್ನು ಸ್ಥಾಪಿಸುವ ಮೂಲಕ ನೂತನ ಬದುಕಿಗೆ ನಾಂದಿ ಹಾಡಿದ್ದಾರೆ. ಇವರಿಗೆ ಸ್ಥಾನಿಕ ಬ್ರಾಹ್ಮಣ ಸಮಾಜದ ಅಭಿನಂದನೆಗಳು. ಸಮಾಜಬಾಂಧವರು ಇವರನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿಸುತ್ತೇವೆ.

## ಶುಭ ವಿವಾಹ

ಶ್ರೀಮತಿ ನಾಗವಲ್ಲಿ, ಶ್ರೀ ಸುಬ್ರಹ್ಮಣ್ಯ ರಾವ್ ಪೆರ್ಡೂರು ಇವರ ಪುತ್ರ **ಶಿವಪ್ರಸಾದ್ ರಾವ್** ಹಾಗೂ ಶ್ರೀಮತಿ ಗೀತಾ ಮತ್ತು ಶ್ರೀ ಕೃಷ್ಣಯ್ಯ ಬೇರಿಕೆ ಇವರ ಪುತ್ರಿ **ಅಕ್ಷತಾ ಬಿ** ಇವರ ವಿವಾಹ ಸಮಾರಂಭವು 10.12.2020ರಂದು ಸುಳ್ಯ ಬೆಳ್ಳಾರೆಯ ಅಜಪಿಲ ಮಹಾಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಯಿತು.

**** ****

ಮುಂಡ್ಕೂರು ಶ್ರೀಧರ್ ರಾವ್ ಮತ್ತು ಶ್ರೀಮತಿ ರತ್ನ ಇವರ ಪುತ್ರ **ಶ್ರೀ ರಂಜನ್** ಹಾಗೂ ಶ್ರೀ ದೇವದತ್ತ ಹಾಗೂ ಶ್ರೀಮತಿ ಪ್ರಸನ್ನ ಅವರ ಪುತ್ರಿ **ಶ್ರೇಯಾ** ಇವರ ವಿವಾಹ 10.12.2020 ರಂದು ಮುಂಬೈಯ ಪೇಜಾವರ ಮಠದಲ್ಲಿ ನೆರವೇರಿತು.

**ಕವನ**

### ವಿದಾಯ ವರ್ಷ 2020

ತಿಂದುಂಡು ಮಲಗಿದ್ದೆ ವರ್ಷಾಂತ್ಯ 2019
ತಲೆಯಡಿಯಲಿ ಮಲಗಿತ್ತು ವರ್ಷಾದಿ 2020
ಮುಂಜಾನೆ ತೂಗಿಸಿದೆ ಕಾಲನಿರ್ಣಯದ ಹಾಳೆ
ಕಾಲವೇ ಬದಲಾಯ್ತು ತಿಂಗಳುದುರಿದ ಮೇಲೆ

ಉಹಾನ್ ಮಾಡಿತೊಂದು ಹೊಸ ರೋಗ ಸೃಷ್ಟಿ
ಚೈನದಿಂದ ಹರಿಸುತು ಜಗದಗಲಕೆ ವಕ್ರ ದೃಷ್ಟಿ
ಕಂಡು ಕೇಳರಿಯದ ಹೊಸ ರೋಗ ಕೊರೊನ
ಔಷದಿ ಕಂಡು ಹುಡುಕಿಲ್ಲ ಮಾಡಲದನು ಹರಣ

ತಿಂದು ನುಂಗಿತದು ಲಕ್ಷಾಂತರ ಜೀವ ನಾಶ
ಬದುಕುಳಿಯುವ ದಾರಿ ಮನೆಯೇ ವನ ವಾಸ
ಸಂಚಾರ ನಿರ್ಬಂಧ ಮುಖಕೊಂದು ಮಾಸ್ಕು
ಕೈ ತೊಳೆದು ಸಾಕಾಯ್ತು ಕ್ರಿಮಿನಾಶಕ ಸೋಪು

ರೋಗಾಂತ್ಯವಾದೀತು ಹೇರಿದರು ಲಾಕ್ ಡೌನು
ಕೆಲಸವಿಲ್ಲದೆ ಜನ ಓಡಿದರು ಹುಟ್ಟೂರಿಗೆ ಸಡನ್ನು
ಬಾರಿಸಿ ಘಂಟೆ ಜತೆಗೆ ಬೆಳಗಿ ಸಂಧ್ಯಾ ದೀಪ
ಕೊರೊನ ನೀಗಿಸಲೆಂದು ಅದರ ಮನದ ತಾಪ

ಎಲ್ಲೆಲ್ಲೂ ನೋಡಿದರು ರೋಗ ನಿರೋಧಕ ಘಟಕ
ಜನರಲ್ಲಿ ಹೊತ್ತಿಹರು ಕೊರೊನ ಪೀಡಿತ ಫಲಕ
ವೈದ್ಯರು ಕಾಣದಂತಿಹರು ತೊಟ್ಟು ಪಿ ಪಿ ಕಿಟ್ಟು
ಹಗಲಿರುಳು ದುಡಿಯುವರು ಅನ್ನ ನಿದ್ರೆಯ ಬಿಟ್ಟು

ವರುಷ ಇಪ್ಪತ್ತರಲೇ ಹತನಾಗು ವೈರಿ ಕೊರೊನ
ನಿನ್ನ ಅಟ್ಟಹಾಸದಲಾಯ್ತು ಬಹು ಜೀವಹರಣ
ಹೊಸ ವರುಷವು ತರಲಿ ನವ ಚೈತನ್ಯದ ಮಳೆ
ಹರಿಯಲಿ ದೇಶದೆಲ್ಲೆಡೆ ಸುಖ ಸಮೃದ್ಧಿಯ ಹೊಳೆ

–ಉಮೇಶ್ ರಾವ್ ಕೆ. (ಉರಾಕೆ)

### ಶ್ರೀಕೃಷ್ಣ

ವಸುದೇವ ದೇವಕಿ ಮುದ್ದು ಕಂದನೆ
ಆಲ ದೆಲೆಯ ಮೇಲೆ ಪವಡಿಸಿದವನೆ
ಬಾಯೊಳು ಬ್ರಹ್ಮಾಂಡ ತೋರಿದವನೆ
ದುಷ್ಟ ಅಸುರ ಸಂಹಾರಕನೆ..!!

ಧರ್ಮದ ರಕ್ಷಣೆ ಶಿಷ್ಟರ ಪರಿಪಾಲಕನೆ
ದ್ರೌಪದಿಯ ಮಾನವ ಕಾಯ್ದವನೆ
ಪಾಂಡವರ ಪ್ರಿಯ ಮುಕುಂದನೆ
ಗಾನ ಲೋಲ ರಾಧಾ ಮಾಧವನೆ..!!

ಬಾಲ ಲೀಲೆಯ ಜಗಕೆ ತೋರಿದವನೆ
ನಂದನ ಕಂದ ನವನೀತ ಚೋರನೆ
ಅಗಣಿತ ಗುಣಗಳ ಮಹಾ ಮಹಿಮನೆ
ಜಗಕೆ ಗೀತೋಪದೇಶ ಮಾಡಿದವನೆ..!!

ಗೋವುಗಳ ಕಾಯ್ದ ಗೋಪಾಲನೆ
ವರಹಾರ ಕೌಸ್ತುಭ ರತ್ನ ಧರಿಸಿದವನೆ
ಶ್ರೀ ತುಳಸಿ ಪ್ರಿಯ ಸರ್ವೋತ್ತಮನೆ
ಕೃಷ್ಣಾ ಕೃಷ್ಣಾ ಕೃಷ್ಣಾ ಕೃಷ್ಣ ಶ್ರೀ ಕೃಷ್ಣ..!!

–ರಮಾದೇವಿ ರಾವ್


ಕಾರ್ಕಳದಲ್ಲಿ ಪ್ರಥಮ
ತಾಜಾ ಹಾಗೂ ಉತ್ತಮ ಗುಣ ಮಟ್ಟದ ಎಲ್ಲಾ ರೀತಿಯ ಹಿಟ್ಟು ಒಂದೇ ಜಾಗದಲ್ಲಿ ಲಭ್ಯ.
ನಮ್ಮಲ್ಲಿ ಗೋಧಿ, ಜೋಳ, ಅಕ್ಕಿ, ರಾಗಿ ಹಿಟ್ಟು ಹಾಗೂ ಅಕ್ಕಿ ರವ ದೊರೆಯುತ್ತದೆ.
ಪ್ರಕೃತಿ ಸ್ಟೋರ್ಸ್
ಪ್ರಸಾದ್ ಭವನ (ವಿ. ಕೆ. ಡೆಕೋರೇಟರ್ಸ್ ಬಳಿ)
ಹೋಟೇಲ್ ಮಹಾಲಸಾ ಎದುರು, ತೆಳ್ಳಾರು ರಸ್ತೆ, ಕಾರ್ಕಳ
For The First Time We Are Introducing Fresh And Good Quality Of Rice, Ragi, Jowar & Wheat Flour Along With Rice Rava In Single Venue
Contact: Prakrithi Stores, Prasad Bhavana (Near: V. K. Decoratores), Opp: Hotel Mahalasa, Tellar Road, Karkala. Mob: 8296375933

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.
N. Laxmi Prasad
ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

With Best Complimemts From
SRI M. SHAILESH RAO Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

Buying and selling shares as easy as checking your emails
Sharekhan Online Trading Account Features:
Your bank account gets directly linked to trading account
Can do direct fund transfer from any of 11 leading banks
Choose your trading account, Classic, FastTrade, TradeTiger
Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
Visit : www.sharekhan.com


ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655


Ashwath
Mobile : 9480532202
9663146180
Email : aheperdoor@gmail.com
SKANDA Digital Studio
Photography & Videography
Near Syndicate Bank
Car Street
Perdoor - 576 124
Udupi Tq. & Dist.

## ಗ್ರಾಮಪಂಚಾಯತಿ ಚುನಾವಣೆಯಲ್ಲಿ ಜಯಗಳಿಸಿ ನಮ್ಮವರು



### ಶ್ರೀ ಅಶೋಕ್ ರಾವ್ ಕಟಪಾಡಿ

ಉಡುಪಿ ಸಂಘದ ನಿರ್ದೇಶಕರಾದ ಶ್ರೀ ಅಶೋಕ್ ರಾವ್ ಕಟಪಾಡಿ ಇವರು ಕಟಪಾಡಿ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಭಾರಿ ಬಹುಮತದಿಂದ ಚುನಾಯಿತರಾಗಿದ್ದಾರೆ. ಇವರು 3ನೇ ಬಾರಿಗೆ ಸತತವಾಗಿ ಗೆಲುವು ಸಾಧಿಸಿದ್ದು ಪ್ರಸ್ತುತ ಕಟಪಾಡಿ ಸಿ.ಎ. ಬ್ಯಾಂಕ್‌ನ ನಿರ್ದೇಶಕರಾಗಿ ಕಟಪಾಡಿ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷರಾಗಿ ಹಾಗೂ ಮೂಡಬೆಟ್ಟು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಮುಖ್ಯ ಪ್ರಬಂಧಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



### ಶ್ರೀ ಗಿರೀಶ್ ರಾವ್ ಬಾರ್ಕೂರು

ಶ್ರೀ ಗಿರೀಶ್ ರಾವ್ ಬಾರ್ಕೂರು ಇವರು ಬಾರ್ಕೂರಿನ ಕಾಡೂರು ಗ್ರಾಮದ ಗ್ರಾಮಪಂಚಾಯತ್ ಚುನಾವಣೆಯಲ್ಲಿ ಅತ್ಯಧಿಕ ಮತಗಳಿಂದ ಆಯ್ಕೆಯಾಗಿರುತ್ತಾರೆ ಇವರು ತಂತ್ರಾಡಿ ಸುಬ್ರಹ್ಮಣ್ಯ ರಾವ್ ಇವರ ಪುತ್ರ.



### ಶ್ರೀ ರವಿರಾಜರಾವ್ ಎಲ್ಲೂರು

ಶ್ರೀ ರವಿರಾಜರಾವ್ ಎಲ್ಲೂರು ಇವರು ಎಲ್ಲೂರಿನ ಗ್ರಾಮಪಂಚಾಯತಿ ಚುನಾವಣೆಯಲ್ಲಿ ನಾಲ್ಕನೆಯ ಬಾರಿಗೆ ಆಯ್ಕೆಯಾಗಿರುತ್ತಾರೆ.



### ಶ್ರೀ ಎ.ಗುರುರಾಜ ರಾವ್

ಆರೂರು ಗ್ರಾಮಪಂಚಾಯತ್ ಚುನಾವಣೆಯಲ್ಲಿ ಶ್ರೀ ಆರೂರು ಗುರುರಾಜ್‌ರವರು ಅತ್ಯಧಿಕ ಮತಗಳಿಂದ ಆಯ್ಕೆಯಾಗಿದ್ದಾರೆ. ಇವರು ಆರೂರು ದಿ|ಸುಬ್ರಹ್ಮಣ್ಯ ರಾವ್‌ರವರ ಪುತ್ರ ಹಾಗೂ ವೃತ್ತಿಯಲ್ಲಿ ಇಂಜಿನಿಯರ್ ಆಗಿದ್ದಾರೆ.



### ಶ್ರೀಮತಿ ಚಂದ್ರಾವತಿ

ಆರೂರು ಗ್ರಾಮಪಂಚಾಯತ್ ಚುನಾವಣೆಯಲ್ಲಿ ಶ್ರೀಮತಿ ಚಂದ್ರಾವತಿ ಇವರು ಬಹುಮತದಿಂದ ಆಯ್ಕೆಯಾಗಿದ್ದಾರೆ. ಇವರು ಆರೂರು ಸುಬ್ರಹ್ಮಣ್ಯ ರಾವ್ ಇವರ ಪತ್ನಿ.



### ಶ್ರೀಮತಿ ಸಂಧ್ಯಾ

ಶ್ರೀಮತಿ ಸಂಧ್ಯಾ ಇವರು ಸಾಸ್ತಾನ ಪಾಂಡೇಶ್ವರ ಪಂಚಾಯತ್‌ಗೆ ಅತ್ಯಧಿಕ ಮತಗಳಿಂದ ಆಯ್ಕೆಯಾಗಿದ್ದಾರೆ.



### ಶ್ರೀಮತಿ ಉಷಾ ಎಂ.ರಾವ್

ಶ್ರೀಮತಿ ಉಷಾ ಎಂ.ರಾವ್ ಇವರು ವರಂಗ ಗ್ರಾಮಪಂಚಾಯತ್ ಚುನಾವಣೆಯಲ್ಲಿ ಸತತ ಮೂರನೇ ಬಾರಿಗೆ ಆಯ್ಕೆಯಾಗಿದ್ದಾರೆ.



### ಶ್ರೀಮತಿ ಪಲ್ಲವಿ ಎಸ್.ಹೆಬ್ಬಾರ್


ಶ್ರೀಮತಿ ಪಲ್ಲವಿ ಎಸ್.ಹೆಬ್ಬಾರ್ ಇವರು ಮುದ್ರಾಡಿ ಗ್ರಾಮಪಂಚಾಯತ್‌ನ ಕಬ್ಬಿನಾಲೆ ಮೇಲ್ಮಠ ವಾರ್ಡಿನಿಂದ ಆಯ್ಕೆಯಾಗಿದ್ದಾರೆ.

## ಶ್ರೀ ಸಾಂತೂರು ಸದಾಶಿವ ರಾವ್‌ರವರಿಗೆ ‘ಯಕ್ಷಚೇತನ’ ಪ್ರಶಸ್ತಿ



26-12-2020ರಂದು ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ 17 ಸಾಧಕ ಹಿರಿಯ ಕಲಾವಿದರಿಗೆ ವಿವಿಧ ದತ್ತಿನಿಧಿಯಿಂದ ತಲಾ 20,000/- ಮೊತ್ತನ್ನೊಳಗೊಂಡ ‘ಯಕ್ಷಗಾನ ಕಲಾರಂಗ ಪ್ರಶಸ್ತಿ’ ಪ್ರಧಾನ ಮಾಡಲಾಯಿತು. ನಮ್ಮ ಸಮಾಜದ ನಿವೃತ್ತ ಶಿಕ್ಷಕ, ಯಕ್ಷಕಲಾವಿದ, ವಿದ್ವಾಂಸ, ಪ್ರವಚನಕಾರರಾದ ಶ್ರೀ ಸಾಂತೂರು ಸದಾಶಿವ ರಾವ್ ಇವರಿಗೆ ಯಕ್ಷಚೇತನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಶಾಸಕ ಶ್ರೀ ಕೆ. ರಘುಪತಿಭಟ್, ಪೇಜಾವರ ಹಾಗೂ ಅದಮಾರು ಶ್ರೀಗಳು ಉಪಸ್ಥಿತರಿದ್ದರು.

## ಕಾರ್ಕಳದ ಅಶ್ವಿನ್‌ಗೆ ನೌಕಾಪಡೆಯ ಸಿ.ಎನ್.ಎಸ್ ಪದಕ



ಶುಂಠಿಪಾಡಿ ಮೂಲದವರಾದ ಅಶ್ವಿನ್ ಎಂ.ರಾವ್ ಅವರು ಭಾರತೀಯ ನೌಕಾಪಡೆಯ ಸಿಎನ್‌ಎಸ್ (ಚೀಫ್ ಆಫ್ ನೇವಲ್ ಸ್ಟಾಫ್) ಪದಕದ ಗೌರವಕ್ಕೆ ಪಾತ್ರರಾಗಿದ್ದಾರೆ. ಅಶ್ವಿನ್ ಅವರು ಕಾರ್ಕಳದ ಶುಂಠಿಪಾಡಿ ಮನೋಹರ ರಾವ್ ಮತ್ತು ಸಾವಿತ್ರಿ ಮನೋಹರ ದಂಪತಿಯ ಪುತ್ರ. 2005ರಲ್ಲಿ ಕೊಚ್ಚಿಯಲ್ಲಿ ನೌಕಾದಳದ ಸಬ್ ಲೆಫ್ಟಿನೆಂಟ್ ಆಫೀಸರ್ ಆಗಿ ನೇಮಕಗೊಂಡು, 2005 ರಿಂದ 2007ರ ವರೆಗೆ ಐ.ಎನ್.ಎಸ್. ತಬರ್, ಐ.ಎನ್.ಎಸ್. ವಲ್ಸುರಾ, ಐ.ಎನ್.ಎಸ್. ತಲ್ವಾರ್ ನೌಕೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಇದೇ ಸಮಯದಲ್ಲಿ 2007 ರಲ್ಲಿ ಏರೋನಾಟಿಕ್ ಎಂಜಿನಿಯರಿಂಗ್‌ನಲ್ಲಿ ಎಂ.ಟೆಕ್ ಪದವಿ ಪಡೆದರು. 2008 ರಿಂದ 2011 ರ ವರೆಗೆ ಏರೋನಾಟಿಕ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿ ಅನಂತರ ಕೊಚ್ಚಿಯ ಐ.ಎ.ಎನ್.ಎಸ್. ಗರುಡದಲ್ಲಿ ಲೆಫ್ಟಿನೆಂಟ್ ಕಮಾಂಡರ್ ಆಗಿ ಪದೋನ್ನತಿ ಹೊಂದಿದರು. 2013 ರಲ್ಲಿ ಮೂರನೇಯ ಸ್ನಾತಕೋತ್ತರ ಪದವಿಯನ್ನು ಪಡೆದ ಬಳಿಕ ಅಶ್ವಿನ್ ದಿಲ್ಲಿಯಲ್ಲಿರುವ ನೌಕಾದಳದ ಪ್ರಧಾನ ಕಚೇರಿಯಲ್ಲಿ ಸಿಸ್ಟಮ್ ಸ್ಪೆಷಲಿಸ್ಟ್ ಆದರು. 2017 ರಲ್ಲಿ ಪದೋನ್ನತಿ ಪಡೆದು ಕಮಾಂಡರ್ ಆಗಿ ಕೊಚ್ಚಿಯ ಐ.ಎಸ್.ಎನ್. ಶಾರದಾದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಏರೋನಾಟಿಕಲ್ ಟ್ರೈನಿಂಗ್ ಸಂಸ್ಥೆಯ ನಿರ್ದೇಶಕರಾಗಿದ್ದಾರೆ.



## ಡಾ|ಹರೀಶ್ ದೇಲಂತಬೆಟ್ಟು

ಡಾ|ಹರೀಶ್ ದೇಲಂತಬೆಟ್ಟು ಇವರು ಶಿವಮೊಗ್ಗದ ಎ.ಕೆ.ಸುಬ್ಬಯ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಮಾನಸಿಕ ರೋಗ ವಿಭಾಗದ ಪ್ರಧ್ಯಾಪಕರು ಹಾಗೂ ಮುಖ್ಯಸ್ಥರಾಗಿ ನೇಮಕವಾಗಿರುತಾರೆ. ಹಾಗೆಯೇ ಅವರನ್ನು ಭದ್ರಾವತಿಯ ಬ್ರಾಹ್ಮಣ ಸಂಘವು ಸಂಘದ ಗೌರವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿರುತ್ತದೆ. ಇವರಿಗೆ ಸ್ಥಾನಿಕ ಸಮಾಜದ ಅಭಿನಂದನೆಗಳು.

## ರೋ| ಉಮೇಶ್ ರಾವ್ ರೋಟರಿ ಜಿಲ್ಲೆಯಲ್ಲಿ ಪ್ರಥಮಸ್ಥಾನಿ ಅಧ್ಯಕ್ಷ




ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಈ ನಾಲ್ಕು ಕಂದಾಯ ಜಿಲ್ಲೆಗಳನ್ನೊಳಗೊಂಡ ರೋಟರಿ ಜಿಲ್ಲೆ 3182 ರ 11 ವಲಯಗಳ 55 ಸಣ್ಣ ಕ್ಲಬ್‌ಗಳ ವಿಭಾಗದಲ್ಲಿ ಕಟಪಾಡಿ ರೋಟರಿ ಕ್ಲಬ್ ಕಳೆದ ವಾರ್ಷಿಕ ಸಾಲಿನಲ್ಲಿ ನಿರಂತರವಾಗಿ ಮಾಡಿದ ಸೇವಾ ಚಟುವಟಿಕೆಗಳಿಗೆ ರೋಟರಿಯ ಪ್ರತಿಷ್ಠೆಯ 24 ಪ್ರಶಸ್ತಿಗಳನ್ನು ಪಡೆದು ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನಿಯಾಗಿ ಮೂಡಿ ಬಂದಿದೆ, ಮಾತ್ರವಲ್ಲದೇ ರೋಟರಿಯ ಅತ್ಯುನ್ನತೆಯ ಪ್ರೆಸಿಡೆಂಟ್ ಸಾಯೇಟೇಶನ್ ಅವಾರ್ಡಿನಲ್ಲಿ ಪ್ಲಾಟಿನಂ ವರ್ಗದ ಮಾನ್ಯತೆ ಪಡೆದಿದೆ. ಇದರ ಅಧ್ಯಕ್ಷರಾದ ಉಡುಪಿಯ ಶ್ರೀ ಉಮೇಶ್‌ರಾವ್ ಕುಡಾಲ್ ಇವರ ನಾಯಕತ್ವದಲ್ಲಿ ಕಟಪಾಡಿ ರೋಟರಿ ಈ ಸಾಧನೆ ಮಾಡಿರುತ್ತದೆ.



## ಎಂ.ಡಿ.ಎಸ್. ಪದವಿಯಲ್ಲಿ ರ್‍ಯಾಂಕ್

ಉಡುಪಿ ಕುಕ್ಕಿಕಟ್ಟೆ ಶ್ರೀ ದಾಸಪ್ಪಯ್ಯರವರ ಪುತ್ರ ಶ್ರೀ ರಮೇಶರಾವ್ ಹಾಗೂ ಸಂಗೀತಾ ದಂಪತಿಗಳ ಪುತ್ರಿ ಕುಮಾರಿ ಡಾ.ಪಲ್ಲವಿ ಇವರು ಧಾರವಾಡದ ಧರ್ಮಸ್ಥಳ ದಂತ ವಿಜ್ಞಾನ ಕಾಲೇಜಿನ ಎಂ.ಡಿ.ಎಸ್. ಪದವಿಯಲ್ಲಿ ಎಂಟನೇ ರ್‍ಯಾಂಕ್‌ಗಳಿಸಿ ಉತ್ತೀರ್ಣರಾಗಿದ್ದಾರೆ.



## ಎಂ.ಡಿ. ಆಯುರ್ವೇದ ಪದವಿಯಲ್ಲಿ ರ್‍ಯಾಂಕ್

ಹೆರ್ಗ ಶ್ರೀನಿವಾಸರಾವ್ ಹಾಗೂ ಆಶಾ ದಂಪತಿಗಳವರ ಮಗಳು ಕುಮಾರಿ ಡಾ.ಚೈತ್ರಾ ಇವರು ಎಂ.ಡಿ. ಆಯುರ್ವೇದ ಪದವಿಯಲ್ಲಿ ಪ್ರಥಮ ವರ್ಷದಲ್ಲಿ ಐದನೇ ರ್‍ಯಾಂಕ್, ತೃತೀಯ ವರ್ಷದಲ್ಲಿ ಹತ್ತನೇ ರ್‍ಯಾಂಕ್‌ಗಳಿಸಿ ಮೈಸೂರು ಆಯುರ್ವೇದ ವಿದ್ಯಾಲಯದಿಂದ ಉತ್ತೀರ್ಣರಾಗಿದ್ದಾರೆ. ಇವರು ಪ್ರಸ್ತುತ ಸುಳ್ಯದ ಕೆ.ವಿ.ಜಿ. ಆಯುರ್ವೇದ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ ವೃತ್ತಿ ಜೀವನವನ್ನು ಆರಂಭಿಸಿದ್ದಾರೆ. ಇವರು ಅತ್ಯುತ್ತಮ ಭರತನಾಟ್ಯ ಕಲಾವಿದೆಯಾಗಿ ವಿದ್ವತ್ ಪದವಿ ಪಡೆದು ಈಗಾಗಲೇ ಹಲವಾರು ಕಡೆಗಳಲ್ಲಿ ಪ್ರದರ್ಶನವನ್ನು ನೀಡಿ ಮೆಚ್ಚುಗೆ ಪಡೆದಿದ್ದಾರೆ. ಕರ್ನಾಟಕ ರಾಜ್ಯದ ಭರತನಾಟ್ಯ ಪರೀಕ್ಷಾ ಮಂಡಳಿಯ ಸದಸ್ಯರಾಗಿದ್ದಾರೆ.

With Best Compliments From :

***Rajathadri Hotel Pvt. Ltd.
Lodging & Boarding

Sri Ramesh Shanubhag, Usha, Sanketh and Kavitha
Directors



OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಬಂಟ್ವಾಳ ವಲಯ ವಿಟ್ಲ



13.12.2020ನೇ ಭಾನುವಾರ ದಂದು ಶ್ರೀಯುತ ಶಿವರಾಮ ರಾವ್ ಬೈರಿಕಟ್ಟೆ ಇವರ ಮನೆಯಲ್ಲಿ ಭಜನಾ ಕಾರ್ಯಕ್ರಮ ಮತ್ತು ಬಂಟ್ವಾಳ ತಾಲೂಕಿನ ಸ್ಥಾನಿಕ ಬ್ರಾಹ್ಮಣ ಸಮಾಜದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡುವ ಕಾರ್ಯಕ್ರಮವನ್ನು ಸಭಾದ ಸಭೆಯೊಂದಿಗೆ ನಡೆಸಲಾಯಿತು. ಅಧ್ಯಕ್ಷತೆಯನ್ನು ಸಭಾದ ಅಧ್ಯಕ್ಷರಾದ ಶ್ರೀಯುತ ಅನಾರು ಕೃಷ್ಣ ಶರ್ಮರವರು ವಹಿಸಿದ್ದರು. ವೇದಿಕೆಯಲ್ಲಿ ಕಾರ್ಯಕ್ರಮಕ್ಕೆ ಸ್ಥಳಾವಕಾಶದೊಂದಿಗೆ ಎಲ್ಲಾ ರೀತಿಯ ಸಹಕಾರವನ್ನು ನೀಡಿದ ಮನೆಯ ಯಜಮಾನರಾದ ಶ್ರೀಯುತ ಶಿವರಾಮ ಬೈರಿಕಟ್ಟೆಯವರು, ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀಯುತ ಭವಾನಿ ಶಂಕರರಾಯರು, ಉಪಾಧ್ಯಕ್ಷರಾದ ಶ್ರೀಯುತ ದೇವರಾಯರು ಹಾಗೂ ಪ್ರತಿಷ್ಠಾನಕ್ಕೆ ಸ್ಥಳದಾನವನ್ನಿತ್ತ ಶ್ರೀಯುತ ರಮೇಶರಾಯರು ಆಸೀನರಾಗಿದ್ದರು. ಕಾರ್ಯಕ್ರಮ ನಿರ್ವಹಣೆಯನ್ನು ಸಭಾದ ಕಾರ್ಯದರ್ಶಿಯವರಾದ ಸಂತೋಷರವರು ನಡೆಸಿಕೊಟ್ಟರು. ವಿದ್ಯಾರ್ಥಿ ವೇತನ ವಿತರಣೆಯ ನಿರ್ವಹಣೆಯನ್ನು ಸಮಿತಿಯ ನೇತೃತ್ವವಹಿಸಿದ್ದ ಶ್ರೀಮತಿ ಶಾರದಾ ಸುಕುಮಾರ್ ರಾವ್ ವಹಿಸಿದ್ದರು. ದಿಕ್ಸೂಚಿ ಸಂದೇಶವನ್ನು ಶ್ರೀಯುತ ಭವಾನಿಶಂಕರ ರಾವ್ ಮತ್ತು ಡಾ. ಹರೀಶ್ ರಾವ್‌ರವರು ಅಚ್ಚುಕಟ್ಟಾಗಿ ನೆರವೇರಿಸಿದರು. ಸಭಾದ ಅಧ್ಯಕ್ಷರು ಅಧ್ಯಕ್ಷತೆಯ ನೆಲೆಯಲ್ಲಿ ಸಭೆಗೆ ಸಂದೇಶವನ್ನು ಹಾಗೂ ಆಶಯಗಳನ್ನು ತಿಳಿಸಿದರು. ಶ್ರೀಮತಿ ಅರುಣಾ ಶಿವಕುಮಾರ್ ಇವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು. ಆ ಬಳಿಕ ಭೋಜನ ಕಾರ್ಯಕ್ರಮ ಅತಿಥೇಯರ ಸಹೃದಯದ ಸಹಕಾರದೊಂದಿಗೆ ನೆರವೇರುವುದರೊಂದಿಗೆ ದಿನದ ಕಾರ್ಯಕ್ರಮವು ಸಂಪನ್ನ ಗೊಂಡಿರುತ್ತದೆ. ಈ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಸಮಾಜ ಬಾಂಧವರೆಲ್ಲರಿಗೂ ಹಾಗೂ ಸ್ಥಳಾವಕಾಶ ಹಾಗೂ ಉಪಚರಿಸಿ ಸಹಕಾರವನ್ನಿತ್ತ ಶ್ರೀಯುತ ಶಿವರಾಮರಾವ್ ರವರ ಕುಟುಂಬ ವರ್ಗದವರಿಗೂ ಅಲ್ಲದೇ, ಹೊಸದಾಗಿ ವಿದ್ಯಾರ್ಥಿ ವೇತನ ದತ್ತಿನಿಧಿ ಸ್ಥಾಪಿಸಿ ಈ ಬಾರಿ ಹೆಚ್ಚು ವಿದ್ಯಾರ್ಥಿ ವೇತನ ನೀಡಲು ಸಹಕರಿಸಿದ ಶ್ರೀಯುತ ಡಾ.ಹರೀಶ್ ರಾವ್ ಸಹೋದರರಿಗೂ, ವಿದ್ಯಾರ್ಥಿನಿಧಿಗೆ ಪ್ರತಿಬಾರಿಯೂ ದೇಣಿಗೆ ನೀಡಿ ಸಹಕರಿಸುತ್ತಿರುವ ನಮ್ಮ ಸ್ಥಾನಿಕ ಬ್ರಾಹ್ಮಣ ಸಮಾಜ ಬಾಂಧವರೆಲ್ಲರಿಗೂ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಬಂಟ್ವಾಳ ವಲಯ-ವಿಟ್ಲದ ವತಿಯಿಂದ ಅನಂತಾನಂತ ಧನ್ಯವಾದಗಳು.

## ಸ್ಟಾರ್ಟ್ ಅಪ್ ಕಂಪೆನಿಗೆ ಪ್ರಶಸ್ತಿ



ಪ್ರಧಾನಮಂತ್ರಿಗಳ ಆಶಯದಂತೆ ನಮ್ಮ ಸಮಾಜದ ಯುವ ದಂಪತಿಗಳಾದ ಶ್ರೀ ಚೈತನ್ಯ ರಾವ್ ಹಾಗೂ ಶ್ರೀ ರಮ್ಯಾರವರು ಸ್ಥಾಪಿತ ಸ್ಟಾರ್ಟ್ ಅಪ್ Progist Solution ಕಂಪೆನಿ Nascom Emerce 50 ಎಂಬ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಈ ಕಂಪೆನಿಯು ಭಾರತದಲ್ಲಿ ಮುಂಚೂಣಿಯಲ್ಲಿರುವ 50 ಸ್ಟಾರ್ಟ್ ಕಂಪೆನಿಗಳಲ್ಲಿ ಒಂದಾಗಿದ್ದು ಈ ಪ್ರಶಸ್ತಿಗೆ ಭಾಜನವಾಗಿದೆ. ಶ್ರೀ ಚೈತನ್ಯ ರಾವ್ ದಂಪತಿಗಳು ಸ್ಥಾಪಿಸಿದ ಈ ಕಂಪೆನಿಯು ಮುಂಬೈಯಲ್ಲಿದ್ದು 40 ಉದ್ಯೋಗಿಗಳಿಗೆ ಆಶ್ರಯ ನೀಡಿದೆ. ಐಸಿಐಸಿಐ ಬ್ಯಾಂಕ್, ಎಚ್.ಡಿ.ಎಫ್.ಸಿ. ಬ್ಯಾಂಕ್, ರಿಲಯನ್ಸ್ ಜಿಯೋ ಇತ್ಯಾದಿ ಕಂಪೆನಿಗಳನ್ನು ತನ್ನ ಗ್ರಾಹಕರನ್ನಾಗಿ ಹೊಂದಿದೆ. ಶ್ರೀ ಚೈತನ್ಯ ರಾವ್ ಇವರು ಶ್ರೀ ಕೂಕ್ರಾಡಿ ಸುರೇಶ್ ರಾವ್ ಹಾಗೂ ನಾಗವಲ್ಲಿ ದಂಪತಿಗಳ ಪುತ್ರ. ಶ್ರೀಮತಿ ರಮ್ಯಾ ಶ್ರೀ ಎಲ್ಲೂರು ಪ್ರಭಾಕರ ರಾವ್ ಹಾಗೂ ಗೀತಾ ದಂಪತಿಗಳ ಪುತ್ರಿ. ಇವರಿಗೆ ಶಾರದಾ ಬಳಗದ ಶುಭಾಶಯಗಳು.



ಬಳ್ಪ ದೇವಸ್ಥಾನದ ರಥೋತ್ಸವದಂದು ಶ್ರಮದಾನ ಮಾಡಿದ ವೈದಿಕ ಸಮಿತಿ

## ಪಡುಬಿದ್ರೆ ಸ್ಥಾನಿಕ ಸಭಾ ಪ್ರೋತ್ಸಾಹಧನ ವಿತರಣೆ



ದಿನಾಂಕ 27-12-2020 ರಂದು ಬಾಲ ಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ ಪಡುಬಿದ್ರೆಯಲ್ಲಿ ಪಡುಬಿದ್ರೆ ಸ್ಥಾನಿಕ ಬ್ರಾಹ್ಮಣ ಸಭಾದ ವತಿಯಿಂದ ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ನಮ್ಮ ವ್ಯಾಪ್ತಿಯ ವಿದ್ಯಾರ್ಥಿಗಳಾದ ಕೃಷ್ಣಪ್ರಸಾದ್, ವೈಷ್ಣವಿ, ವಾಗೀಶ್, ನಮ್ರತಾ, ಅಕ್ಷತಾ, ರಶ್ಮಿ, ಶೃತಿ ಮತ್ತು ಶಿವಪ್ರಸಾದ್ ಒಟ್ಟು 8 ವಿದ್ಯಾರ್ಥಿಗಳಿಗೆ ತಲಾ ರೂ. 10,000 ದಂತೆ ವಿದ್ಯಾರ್ಥಿ ಪ್ರೋತ್ಸಾಹಧನವನ್ನು ಸಂಘದ ನಿರ್ದೇಶಕರ ಉಪಸ್ಥಿತಿಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಂ.ಕೆ. ಮೋಹನ್ ರಾವ್ ಅವರ ಅಧ್ಯಕ್ಷತೆಯಲ್ಲಿ ವಿತರಿಸಲಾಯಿತು. ಈ ಸಭೆಯಲ್ಲಿ ಸಂಘದ ಸಂಯೋಜಕರಾದ ಎಂ.ಕೆ. ದಿವಾಕರ್ ರಾವ್, ಉಪಾಧ್ಯಕ್ಷರಾದ ಶ್ರೀ ರಾಮರಾವ್, ಶ್ರೀಮತಿ ಸುಮಿತ್ರ ಸುಬ್ಬರಾವ್, ಶ್ರೀ ಲಕ್ಷ್ಮೀಕಾಂತರಾವ್, ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಜನಾರ್ದನ್ ರಾವ್, ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ ರಾವ್ ಕೋಶಾಧಿಕಾರಿ ಶ್ರೀ ಅರವಿಂದ ರಾವ್, ನಿರ್ದೇಶಕರಾದ ಶ್ರೀ ಉಲ್ಲಾಸ್ ರಾವ್, ಶ್ರೀಮತಿ ಶಶಿಕಲಾ ಚಂದ್ರಶೇಖರ್ ರಾವ್, ಶ್ರೀ ನಯನಾಭಿರಾಮಸ್ವಾಮಿ, ಶ್ರೀಮತಿ ವಿಜಯಲಕ್ಷ್ಮೀ ಶರ್ಮ, ಶ್ರೀ ಜ್ಯೋತಿಂದ್ರ ನಾಥ್ ರಾವ್, ಶ್ರೀ ಅರುಣ್ ಕುಮಾರ್ ಹಾಗೂ ಮಹಿಳಾ ವೇದಿಕೆಯ ಸಂಚಾಲಕಿ ಶ್ರೀಮತಿ ಸಾವಿತ್ರಿ ಅರವಿಂದ ರಾವ್ ಮತ್ತಿತರರು ಉಪಸ್ಥಿತರಿದ್ದರು. ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ ರಾವ್ ಸ್ವಾಗತಿಸಿ, ಶ್ರೀ ಅರವಿಂದ ರಾವ್ ವಿದ್ಯಾರ್ಥಿಗಳ ಪಟ್ಟಿಯನ್ನು ವಾಚಿಸಿ, ಶ್ರೀ ದಿವಾಕರ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿ ಶ್ರೀ ಅರುಣ್ ರಾವ್ ವಂದಿಸಿ, ಶ್ರೀಮತಿ ರಮ್ಯಾ ರಾವ್ ಕಾರ್ಯಕ್ರಮ ನಿರೂಪಿಸಿದರು.

**-ಶ್ರೀಮತಿ ರಮ್ಯಾ ಅರುಣ್**

## ಚಿಣ್ಣರ ಅಂಗಳ



ಆರುಶ್ರೀ
(ಶ್ರೀ ಗಣೇಶ್ ಹೆಬ್ಬಾರ್ ಹಾಗೂ ಆರತಿ ದಂಪತಿಗಳ ಪುತ್ರಿ)


**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
“ಗೃಹ ಸಾಲ”
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

**ವೃಂದಾವನ್ ನೆಸ್ಟ್**
ಶುದ್ಧ ಸಸ್ಯಾಹಾರಿ
ಎನ್.ಎಚ್. 66. ಕಟಪಾಡಿ, ಉಡುಪಿ
ನೂತನ ಸುಸಜ್ಜಿತ ವಿಶಾಲ ಉಪಾಹಾರ ಗೃಹ
ಮೊಬೈಲ್:7899990950



ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ

ಆದರದ ಸ್ವಾಗತ ಬಯಸುವ


ಹೋಟೇಲ್ ವೃಂದಾವನ, ಕದ್ರಿ, ಮಂಗಳೂರು | ವಿನೀತ್ ಮೆಡಿಕಲ್ಸ್, ಪಡುಬಿದ್ರಿ | ವಿಶ್ವ ಟ್ರಾನ್ಸ್‌ಪೋರ್ಟ್, ಮಂಗಳೂರು | ಶ್ರೀಮತಿ ಮಧುರಾ ವ್ಯಾಸರಾಜ್ ರಾವ್, ಶ್ರೀ ಧವಳ ಎಲ್ಲೂರು

ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.

ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ

ವಿಶಾಲ ಪಾರ್ಕಿಂಗ್ ವ್ಯವಸ್ಥೆ





Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org